ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ಶಿಬಿರ

ಜಾತಿ ಸಂಘಟನೆಗಳು ಮತ್ತು ಸಮರ್ಪಕತೆ

ಜೀವನ ಶಿಕ್ಷಣ

ಕ್ಯುಪಿಡ್ ಮತ್ತು ಸೈಕಿ

ರಾಜಕೀಯ ಸಮುದ್ರ ಮಥನ

ಸಂಪುಟ : ೧೮ ಏಪ್ರಿಲ್ ೧೯೯೧ ಸಂಚಿಕೆ : ೧೦

ಈ ಸಂಚಿಕೆಯಲ್ಲಿ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧; ಮೇಲುಕೋಟೆ. ಏಪ್ರಿಲ್ ೧೫, ೧೯೯೧; ಸಂಚಿಕೆ ೧೦

ನಿಮ್ಮೊಂದಿಗೆ........

ಲೋಕಸಭಾ ಚುನಾವಣೆ ಬಂದಿದೆ. ಬಂದಿದೆಯೋ, ಅಪ್ಪಳಿಸಿದೆಯೊ? ಅಪ್ಪಳಿಸಿದೆ – ಇದು ಸರಿ. ಇದು ಜನತೆ ಬಯಸಿದ ಚುನಾವಣೆಯಲ್ಲ. ರಾಜಕೀಯ ಪಕ್ಷಗಳ ಕಿತಾಪತಿ, ಅಪನಂಬಿಕೆ, ದ್ವೇಷ – ಇವು ಚುನಾವಣೆಗೆ ಅನಿವಾರ್ಯ ಕಾರಣ. ಮುಂದೆಯೂ ಇದು ಸಂಭವವಿಲ್ಲ ಅನ್ನುವುದಕ್ಕೆ ಯಾವ ಗ್ಯಾರಂಟಿ? 'ಮಂಡಲ್, ಕಮಂಡಲ್, ಬಂಡಲ್', – ಇವೇ ಇಂದಿನ ಚುನಾವಣೆಗೆ ಬೀಜ; ಮುಂದೆ ಚುನಾವಣೋತ್ತರ ಭಾರತದಲ್ಲಿ ಉಳಿಯುವ ವಸ್ತುಗಳೂ ಇವೆ. ಕಳೆದ ವರ್ಷ ಚುನಾವಣೆಯ ಮುನ್ನ ಪ್ರಣಾಳಿಕೆಗಳನ್ನು ಪಕ್ಷಗಳು ಬಿಡುಗಡೆ ಮಾಡಿದ್ದವು. ಈ ಪ್ರಣಾಳಿಕೆಗಳಲ್ಲಿಯ ಬರಹದ ಮಸಿ ಆರುವ ಮೊದಲೇ, ಈಗ ಮೇ ೨೬ರ ಲೋಕ ಸಭಾ ಚುನಾವಣೆಗೆ ಪಕ್ಷಗಳು ಹೊಸ ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಿವೆ. ಆ ಪ್ರಣಾಳಿಕೆಗಳಾದರೂ ಎಂಥವು? ಅವುಗಳಲ್ಲಿ ಹೊಸದೇನಾದರೂ ಇದೆಯಾ? ಯಾವುದಾದರೂ ಹೊಸ ಆದರ್ಶವಿದೆಯಾ? ಪ್ರಣಾಳಿಕೆಗಳೆಂದರೆ ಮತದಾರನಿಗೆ ಒಡ್ಡಿದ ಆಮಿಷಗಳ ಗಂಟು. ಎಲ್ಲ ಪಕ್ಷಗಳು ವಿವಿಧ ಸೌಲಭ್ಯ, ರಿಯಾಯಿತಿ, ರಕ್ಷಣೆ ಮುಂತಾದವುಗಳನ್ನೇ ಬೇರೆ–ಬೇರೆ ಧಾಟಿಯಲ್ಲಿ ವಿವಿಧ ಒತ್ತುಕೊಟ್ಟು ಹೇಳಿವೆಯಷ್ಟೆ. ನಮ್ಮ ದೇಶದ ಸಮಾಜದ ರಚನೆ ಯಾವ ಸಿದ್ಧಾಂತದ ಮೇಲೆ ಆಗ ಬೇಕು, ಇಡೀ ಸಮಾಜವನ್ನು ಯಾವ ರೀತಿ ಕೂಡಿಡಬೇಕು, ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಾವು ಮುಂತಾದ ವಿಷಯಗಳ ಬಗ್ಗೆ ಎಲ್ಲ ಪಕ್ಷಗಳ ಎಲ್ಲ ಪ್ರಣಾಳಿಕೆ ಗಳು ಸರ್ವಾನುಮತದ ಮೌನ ತಾಳಿವೆ! ಅದೇ ರಾಗ, ಅದೇ ತಾನ – ಯಾವ ಹೊಸತನವೂ ಇಲ್ಲ. ನೀತಿಯಿಲ್ಲದ ರಾಜಕಾರಣ ಬಂಜೆಯಂತೆ, ನೀರಿಲ್ಲದ ಕೆರೆ ಯಂತೆ. ಆಮಿಷಗಳೇ ಪ್ರಧಾನವಾಗಿರುವ ಚುನಾವಣೆಗಳಿಂದ ಯಾವ ಒಳ್ಳೆಯದೂ ಸಿದ್ಧಿಸಲಾರದು! ಜನತೆ ಮೋಸ ಹೋಗುವುದು ತಪ್ಪಬೇಕು. ಈ ದೇಶದ ನಿರ್ಮಾಣದ ಗುತ್ತಿಗೆ ಕೇವಲ ರಾಜೀವ ಗಾಂಧೀ, ಚಂದ್ರಶೇಖರ, ದೇವಿಲಾಲ್, ರಾಮಕೃಷ್ಣ ಹೆಗ್ಗಡೆ, ಅಡ್ವಾನಿ, ವಾಜಪೇಯಿಗಳಿಗೆ ಸೇರಿಲ್ಲ ಎಂಬ ಅರಿವು ಜನರಲ್ಲಿ ಮೂಡಬೇಕು. ಜನ ತಮ್ಮ ತನು–ಮನವನ್ನು ಹೊಸ ರೀತಿಯ ಪ್ರಜಾತಂತ್ರಕ್ಕೆ

ಅಣಿಗೊಳಿಸಬೇಕು ಅದರ ಸಿದ್ಧತೆ ಈ ಹತ್ತನೇ ಲೋಕಸಭಾ ಚುನಾವಣೆಯಿಂದಲೇ ಪ್ರಾರಂಭವಾಗಬೇಕು. ಅಲ್ಲವೇ?

* * *

ನಾರಾಯಣ ರೆಡ್ಡಿ ಜೈವಿಕ ವ್ಯವಸಾಯ ಕ್ಷೇತ್ರದಲ್ಲಿ ಒಂದು ದೊಡ್ಡ ಹೆಸರು. ಆದ್ದರಿಂದಲೇ ಆಧುನಿಕ "ಹಸಿರು ಕ್ರಾಂತಿಯ" ಹರಿಕಾರರಿಗೆ ಬೇಡದ ಮನುಷ್ಯ! ಪಟ್ಟಭದ್ರ ಹಿತಾಸಕ್ತಿಗಳಿಗೆ ಬೇಡದ ಈ ರೈತ ನಿಜವಾದ ಅರ್ಥದಲ್ಲಿ ಮಣ್ಣಿನ ಮಗ. ಪ್ರಕೃತಿಯನ್ನೇ ದೇವರೆಂದು ಆರಾಧಿಸುತ್ತ ಅದರ ಸೇವೆಯಲ್ಲಿ ತನ್ನನ್ನು ಅರ್ಪಿಸಿಕೊಂಡ ವ್ಯಕ್ತಿ ನಾಡಿನ ಸಾಮಾನ್ಯ ರೈತನ ಮಿತ್ರ, ಬಂಧು. ಪ್ರಕೃತಿಯ ಸಮತೋಲನದ ತೂಗುಯ್ಯಾಲೆಯಲ್ಲಿ ಕುಳಿತು ಆತ್ಮಸಂತೋಷಗೊಳ್ಳುತ್ತಿರುವ ನಾರಾಯಣ ರೆಡ್ಡಿ ಈಗ್ಗೆ ಕೆಲವು ದಿನಗಳ ಹಿಂದೆ ಟ್ರಸ್ಟ್‌ಗೆ ಬಂದರು. ನಮ್ಮೊಂದಿಗೆ ಕಾಲ ಕಳೆದರು. ಟ್ರಸ್ಟಿನ 'ಹೊಸ ಜೀವನ ದಾರಿ' ವ್ಯವಸಾಯಕ್ಕೆ ತಿರುವು ಕೊಡುವ ಬಗ್ಗೆ ಮಾತನಾಡಿದರು. ಅವರ ಒಂದೊಂದು ಮಾತೂ ಅನುಭವಜನ್ಯವಾಗಿತ್ತು, ತಿಳಿಹಾಸ್ಯದಿಂದ ಕೂಡಿತ್ತು. ಟ್ರಸ್ಟಿನ ಕಾರ್ಯಕರ್ತರಿಗೆ ಹೊಸ ಭರವಸೆ ಮೂಡಿಸಿತು.

* *

ಡಾ॥ ಅಂಬೇಡ್ಕರ ಶತಮಾನೋತ್ಸವ ಸಂದರ್ಭದಲ್ಲಿ ಸೈಕಲ್ ಮೇಲೆ ದೇಶ ಪರ್ಯಟನೆಯನ್ನು ಕೈಗೊಂಡಿರುವ ಹದಿನೈದು ಜನ ಯುವಕರು ಬಂದರು. ಒಂದು ರಾತ್ರಿ ನಮ್ಮೊಂದಿಗೆ ಕಳೆದರು. ಕ್ರಾಂತಿಗೀತೆಗಳನ್ನು ಹಾಡಿದರು. ಗೋಪಿನಾಥ, ಅವರ ಹೆಂಡತಿ ಲಕ್ಷ್ಮಿ, ಅವರ ಮಗ ಹತ್ತು ವರ್ಷದ ಮಹೇಶ ಒಂದು ವರ್ಷದಿಂದ ಸೈಕಲ್ ಯಾತ್ರೆಯಲ್ಲಿದ್ದಾರೆ. ಅವರ ನಿಷ್ಠೆ ಹಾಗೂ ಕೆಚ್ಚು ಪ್ರಶಂಸನೀಯ. ಮಧ್ಯಾಹ್ನದ ಉರಿ ಬಿಸಿಲಿನಲ್ಲಿ ಪುನಃ ಮುಂದಿನ ಊರಿಗೆ ಸೈಕಲ್ ತುಳಿದ ಈ ಕೆಂಪು ಶರ್ಟಿನ, ಕಪ್ಪು ಪ್ಯಾಂಟಿನ ಯುವಕರ ಸಮೂಹವನ್ನು ನೋಡಿ ಮನಸ್ಸು ಗದ್ಗದಗೊಂಡಿತು. ಸಮಾನತೆಯ ಸಮಾಜದ ನಿರ್ಮಾಣಕ್ಕೆ ಇಂಥ ಇನ್ನು ಎಷ್ಟು ಜನ ಯುವಕರು ಬಲಿಗೊಳ್ಳಬೇಕೋ?

–ಸುರೇಂದ್ರ ಕೌಲಗಿ

ಜಾತಿ ಸಂಘಟನೆಗಳು ಮತ್ತು ಸಮರ್ಪಕತೆ

—ನಾ. ಸು. ನಾಗೇಶ

ಮನುಷ್ಯನ ಸಂಘ ಜೀವನದ ಅವಶ್ಯಕತೆಗಳನ್ನು ಕುರಿತು ಇಲ್ಲಿ ಆಲೋಚಿಸುವುದು ತೀರ ಬಾಲಿಶವಾದರೂ ಸಂಘಟನೆಗೆ ಅಗತ್ಯವಾದ ಸಾಮಾಜಿಕ ಕಾರಣಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಮೂಲದ ಚಿಂತನೆ ಅಗತ್ಯವೆನಿಸುತ್ತದೆ. ಮನುಷ್ಯರ ನಡುವಣ ಪ್ರೀತಿಯ ಕಾರಣಗಳನ್ನು ವಿಶ್ಲೇಶಿಸುತ್ತಾ ಜಿಡ್ಡು ಕೃಷ್ಣಮೂರ್ತಿಯವರು ಅಭದ್ರತೆಯ ಭಯದಿಂದಲೇ ಮನುಷ್ಯ ಮನುಷ್ಯರ ನಡುವಣ ಪ್ರೀತಿ ಉದ್ಭವ ಆಗುತ್ತದೆ ಎಂದಿದ್ದಾರೆ. ಎಲ್ಲೆಲ್ಲಿ ತನ್ನ ಬದುಕಿಗೆ, ತನ್ನ ತನ್ನ ಉಳಿವಿಗೆ ಸಂಚಕಾರ ಇದೆಯೋ ಅಲ್ಲೆಲ್ಲ ತನ್ನಂತೆ ಅಭದ್ರಿತ ಜೀವಿಗಳ ಸಮೂಹವಾಗುವುದರ ಮೂಲಕ ಭದ್ರತೆಯನ್ನು ಮೂಡಿಸಿಕೊಳ್ಳುವುದು ಮನುಷ್ಯ ಸಹಜವಾದುದು. ಪ್ರತಿಯೊಬ್ಬನೂ ತನ್ನ ಸ್ವಾರ್ಥಕ್ಕಾಗಿಯೇ ಇನ್ನೊಬ್ಬರನ್ನು ಪ್ರೀತಿಸುತ್ತಾನೆ. ಇನ್ನೊಬ್ಬರನ್ನು ದ್ವೇಷಿಸುತ್ತಾನೆ. ಗುಂಪುಗಟ್ಟುತ್ತಾನೆ. ಯುದ್ಧ ಮಾಡುತ್ತಾನೆ. ಹೀಗೆ ಇವೆಲ್ಲವೂ ಮನುಷ್ಯಾತ್ಮಕ ಅಗತ್ಯಗಳಾದುದರಿಂದಲೇ ಸಂಘಟನೆಗಳು ಯಾವುದೇ ಆಶ್ಚರ್ಯಗಳನ್ನು ನಿರ್ಮಿಸುವುದಿಲ್ಲ. ಆದರೆ ಹೀಗೆ ಭದ್ರತೆಯ ಸ್ವಾರ್ಥದಿಂದಲೇ ಮೂಡುವ ಸಮಾಜ ಸಹ ನಿರಂತರವಾಗಿ ಆಂತರಿಕ ಭದ್ರತೆಯನ್ನು ಕಾಪಾಡುವ ಸಲುವಾಗಿ ಅಂತಹ ಸಂಘಟಿತ ಸಮಾಜದಲ್ಲಿ ನಂಬಿಕೆಗಳು ಹಾಗೂ ವ್ಯವಸ್ಥೆಗಳು ರೂಢಿಗೊಳ್ಳುತ್ತವೆ. ಹೀಗೆ ರೂಢಿಗೊಳ್ಳುವ ವ್ಯವಸ್ಥೆಗಳು ಹಾಗೂ ನಂಬಿಕೆಗಳು ಎಲ್ಲ ಕಾಲಕ್ಕೂ ಒಂದೇ ಬಗೆಯಲ್ಲಿರುವುದು ಸಾಧ್ಯವಾಗುವುದೇ ಇಲ್ಲ. ಬದಲಾದ ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುತ್ತಾ ಪರಿವರ್ತನೆ ಆಗುತ್ತಲೇ ಇರುತ್ತದೆ. ವೇದಗಳ ಪ್ರಾರಂಭ ಕಾಲದಲ್ಲಿನ ಸಾಮಾಜಿಕ ವ್ಯವಸ್ಥೆಯೇ ಇವತ್ತಿಗೂ ಉಳಿಯುವುದು ಸಾಧ್ಯವೇ ಇಲ್ಲ. ಇತಿಹಾಸದ ಪುನರಾವರ್ತನೆಯಂತಹ ಮಾತುಗಳು ಇಲ್ಲಿಗಂತೂ ಶುದ್ಧ ಸುಳ್ಳಾಗುತ್ತದೆ. ಅಂದಿನ ಅಗತ್ಯಗಳಿಗೆ, ಅಂದಿನ ನಾಗರಿಕ ಪರಿಸ್ಥಿತಿಗೆ ಅನುಗುಣವಾಗಿದ್ದ ಚಾತುರ್ವರ್ಣ ಸಮಾಜ ಅವತ್ತಿಗಷ್ಟೇ ಸಮತೋಲನವಾಗಿದ್ದಿರುತ್ತದೆ. ಪರಂಪರಾನುಗತವಾಗಿ ಎಲ್ಲ ಕಾಲಕ್ಕೂ ಇದೇ ಸಲ್ಲುತ್ತದೆ ಎಂದು ಭಾವಿಸುವುದು ತಪ್ಪಾಗುತ್ತದೆ. ಹಿಂದೂ, ಕ್ರಿಸ್ತ, ಇಸ್ಲಾಂ ಹೀಗೆ ಪ್ರಪಂಚದ ಎಲ್ಲ ಧರ್ಮ

ಗಳೂ ಆಚರಣೆಯಲ್ಲಿ ಸುಳ್ಳಾಗುತ್ತಿರುವುದು ಇದೇ ಕಾರಣಕ್ಕಾಗಿ. ಅದರಿಂದಲೇ ಇವತ್ತಿನ ಬದಲಾದ ಸಂದರ್ಭಗಳಿಗೆ, ಇಡೀ ಮನುಷ್ಯ ಜೀವನದ ಬೆಳವಣಿಗೆಯ ಹಿನ್ನೆಲೆಗೆ ಹೊಂದಿಕೊಳ್ಳುವಂತಹ ನಾಗರಿಕತೆ ನಿರ್ಮಾಣವಾಗಿರುತ್ತದೆ. ಅದಕ್ಕೆ ಸೂಕ್ತವಾದಂತೆ ಧರ್ಮ ಸಹ ತನ್ನಂತೆ ತಾನೇ ನಿರ್ಮಾಣವಾಗಬೇಕಾಗುತ್ತದೆ. ಆಚರಣೆಯಲ್ಲಿದ್ದ ವಿಧವಾ ಪರಿಸ್ಥಿತಿ, ಬಾಲವಿವಾಹ ಇತ್ಯಾದಿಗಳ ಕಾಲಧರ್ಮದ ಕಾರಣವಾಗಿಯಷ್ಟೇ ತನ್ನಂತೆ ತಾನೇ ಸತ್ವಹೀನವಾದುದು! ಇಂತಹ ಬೇಕಾದಷ್ಟು ಉದಾಹರಣೆಗಳು ನಮಗೆ ದೊರೆಯುತ್ತಲೇ ಹೋಗುತ್ತವೆ.

ವರ್ಣಗಳ ಆಧಾರದ ಮೇಲೆ ರೂಪಿತವಾಯಿತೆಂದು ನಂಬುವ ಈ ಸಮಾಜದ ಮೂಲವನ್ನು ಇನ್ನಷ್ಟು ಗಮನಿಸಿ ನೋಡಬಹುದು. ಅಂದಿನ ಸಾಮಾಜಿಕ ಅಗತ್ಯ ಗಳಿಗಾಗಿ ಅಂದರೆ ಅದೇ ಸಂಘಟನೆಯ ಆಂತರಿಕ ಭದ್ರತೆಗಾಗಿ ಹಾಗೂ ಅಂದಿನ ಇಡೀ ವ್ಯವಸ್ಥೆಯ ಸಮರ್ಪಕತೆಗಾಗಿ ಸಮಾಜವು ನಿರ್ವಹಣೆಯ ನಾಲ್ಕು ಪ್ರಮುಖ ಅವಶ್ಯಕತೆ ಗಳನ್ನು ಗುರುತಿಸಿಕೊಂಡಿತು. ಹಾಗೆ ಗುರುತಿಸಿಕೊಂಡ ಒಂದೊಂದು ಅವಶ್ಯಕತೆ ಯನ್ನು ನಿಭಾಯಿಸುವ ಸಲುವಾಗಿ ಒಂದೊಂದು ವರ್ಗಕ್ಕೆ ಒಂದೊಂದು ಜವಾಬ್ದಾರಿ ಗಳನ್ನು ಕಟ್ಟಲಾಯಿತು. ಮತ್ತು ಈ ಇಡೀ ವ್ಯವಸ್ಥೆ ನಿರ್ವಹಣೆಯಲ್ಲಿನ ನಿರಂತರ ತೆಯ ಸರಾಗಕ್ಕಾಗಿ ಹಾಗೂ ಕೌಶಲ್ಯದ ಅಭಿವೃದ್ಧಿಗಾಗಿ ವಂಶಪಾರಂಪರ್ಯತೆಯನ್ನು ಒಂದು ನಿಯಮವಾಗಿ ಅಂಗೀಕರಿಸಿತು. ಮೂಲದ ಈ ಕಲ್ಪನೆಯನ್ನು ಸ್ವಲ್ಪ ವಸ್ತು ನಿಷ್ಠವಾಗಿ ತಂದುಕೊಳ್ಳಬೇಕಾದ ಅಗತ್ಯವಿದೆ. ಏಕೆಂದರೆ ಈ ಯಾವುದೇ ಜವಾಬ್ದಾರಿಯ ನಡುವೆ ಅಸಮಾನತೆಯ ಪ್ರಶ್ನೆಯೇ ಇರಲಿಲ್ಲ. ಹಾಗೊಂದು ವೇಳೆ ಮೂಲದಲ್ಲಿ ಎಲ್ಲಾದರೂ ಅಸಮಾನತೆಯನ್ನು ಗುರುತಿಸಿಕೊಂಡಿದ್ದರೆ ಪ್ರಾರಂಭ ದಲ್ಲೇ ವ್ಯವಸ್ಥೆ ನಿರ್ನಾಮವಾಗುತ್ತಿತ್ತು. ಅದರಿಂದಾಗಿ ಸೀಮಿತದಾಗಿದ್ದ ಅಂದಿನ ಅಗತ್ಯಗಳ ಕಾರಣವಾಗಿ ನಿರ್ಮಿತವಾದ ಆ ನಾಲ್ಕೂ ವರ್ಗಗಳ ನಡುವೆ ಯಾವುದೇ ಭೇದಗಳಿರಲಿಲ್ಲ. ಘರ್ಷಣೆಗಳಿರಲಿಲ್ಲ. ಬದಲಾಗಿ ಅಂದಿಗೆ ಅದು ಅತ್ಯಂತ ಆರೋಗ್ಯ ಕಾರಿ ವ್ಯವಸ್ಥೆಯಾಗಿತ್ತು. ಉತ್ಪಾದನೆ, ವಿತರಣೆ, ವ್ಯವಸ್ಥಾಪಾಲನೆ ಮತ್ತು ಪೋಷಣೆ ಇವೆಲ್ಲದರ ಸಾಮಾಜಿಕ ಸಮತೋಲನ ಅಂದಿನ ಗುರಿಯಾಗಿತ್ತು. ಆದರೆ ಅದು ಹೊಟ್ಟೆಯಿಟ್ಟ ಪರಿ ಮಾತ್ರ ಯಾವತ್ತೂ ಮನುಷ್ಯನ ಸ್ವಭಾವಗಳಾದ ಸ್ವಾರ್ಥದ ಆಗರವಾಗಿ ಹೋಯಿತು. ಪ್ರತಿಯೊಂದು ಸಮಾಜದ ಯಶಸ್ವಿ ನಿರ್ವಹಣೆಯಲ್ಲಿ ಸಮಾಜದ ಆಂತರಿಕ ಭದ್ರತೆಗಾಗಿ ಒಂದಿಷ್ಟು ಸ್ವಾರ್ಥವನ್ನು ಬಲಿಕೊಡಬೇಕಾದುದು ಅನಿವಾರ್ಯ. ಯಾವಾಗ ಇದು ವಿಫಲವಾಗುವುದೋ ಅಲ್ಲಿಂದಲೇ ಆ ಸಮಾಜ ಅಥವಾ ಆ ವ್ಯವಸ್ಥೆ ಕೊಳೆಯಲು ಪ್ರಾರಂಭಿಸುತ್ತದೆ.

ಆದ್ದರಿಂದ ಕಾಲಕ್ರಮೇಣ ಬದಲಾದ ನಾಗರಿಕತೆಗೆ ಅನುಗುಣವಾಗಿ ಮಾರ್ಪಾಟು ಗೊಳ್ಳಬೇಕಾದ ವ್ಯವಸ್ಥೆಯಲ್ಲಾಗಲೀ, ಸಾಮಾಜಿಕ ಸವಲತ್ತುಗಳ ವಿತರಣೆ ಯಲ್ಲಾಗಲೀ, ನಿರ್ವಹಣೆಯಲ್ಲಾಗಲೀ ಸಮತೋಲನವನ್ನು ಕಾಪಾಡಿಕೊಳ್ಳಲಾಗದೇ

ಜವಾಬ್ದಾರಿಗಳ ನಡುವೆ ವರ್ಗ ಭೇದಗಳು ಹಾಗೂ ಹಂತಗಳು ರೂಪುಗೊಂಡವು. ಮನುಷ್ಯನೇ ಮನುಷ್ಯನನ್ನು ದ್ವೇಷಿಸುವ ಮತ್ತು ಶೋಷಣೆಯಿಂದ ದೊರಕುವ ಸೌಲಭ್ಯದ ಆಸೆಗಾಗಿ ಬಲಾಬಲಗಳನ್ನು ರೂಢಿಸಿಕೊಳ್ಳುವ ಅಸಹ್ಯ ಪ್ರವೃತ್ತಿ ಅಂದಿನಿಂದಲೇ ಪ್ರಾರಂಭವಾಯಿತು. ಹೀಗಾಗಿ ಧರ್ಮವನ್ನು ಸಾಮಾಜಿಕತೆಗೆ ಬದಲಾಗಿ ಸ್ವಾರ್ಥಕ್ಕೆ ಬಳಸಲಾರಂಭಿಸಿದರು.

ಎಲ್ಲ ಕಾಲಕ್ಕೂ ಉಳಿಸಿಕೊಳ್ಳಲು ಯತ್ನಿಸಿದ ಎಲ್ಲ ಧರ್ಮಗಳಲ್ಲೂ ಇದೇ ಪ್ರವೃತ್ತಿಯಾಯಿತು. ಬಲವಿದ್ದವರು ರೂಪಿಸಿದುದೇ ಆಚರಣೆಯಾಯಿತು. ಇದರಿಂದಲೇ ಇತಿಹಾಸದುದ್ದಕ್ಕೂ ಕಾಲಕ್ಕೆ ಅನುಗುಣವಾಗಿ ಹೊಸ ಹೊಸ ಧರ್ಮಗಳು ಹುಟ್ಟಲಾರಂಭಿಸಿದವು. ಬೌದ್ಧ, ಜೈನ, ಸಿಖ್, ವೀರಶೈವ ಹೀಗೆ ಇಷ್ಟೆಲ್ಲ ಧರ್ಮಗಳು ಆಯಾ ಕಾಲದ ಬದಲಾವಣೆಯನ್ನು ಗಮನಿಸಿಯೇ ರೂಪುಗೊಂಡವುಗಳಾದರೂ, ಮೂಲ ಮನುಷ್ಯನನ್ನು ಬದಲಾವಣೆಗೆ ರೂಪಿಸಲಾರದೇ ಮತ್ತಷ್ಟು ವರ್ಗಗಳನ್ನು ನಿರ್ಮಾಣ ಮಾಡಲಷ್ಟೇ ಸಫಲವಾಯಿತು. ಈ ಎಲ್ಲ ಕಾಲದಲ್ಲಿ ಈ ಹೊಸ ವರ್ಗಗಳಿಗೆ ಸದಸ್ಯರಾದವರು ಯಾರು ಎನ್ನುವುದು ಬಹಳ ಮುಖ್ಯವಾದುದೂ, ಹಾಗೂ ಕುತೂಹಲದ ಸಂಗತಿಯಾಗುತ್ತದೆ. ಏಕೆಂದರೆ ಮನುಷ್ಯ ನಿರಂತರವಾಗಿ ಬೇರೆ ಬೇರೆ ಸಂಘಟನೆಯಲ್ಲಿ ತೊಡಗಿರುವುದಕ್ಕೆ ಕಾರಣಗಳು ಸಿಗುವುದು ಇಂತಹ ನೆಲೆಗಳನ್ನು ಕೆದಕಿದಾಗಲೇ. ಇಲ್ಲಿ ಹೊಸ ವರ್ಗಗಳನ್ನು ಸೃಷ್ಟಿಮಾಡಿದವರು ಯಾರು ಎನ್ನುವುದು ಪ್ರಮುಖವಲ್ಲ. ಏಕೆಂದರೆ ಹೊಸ ವರ್ಗಗಳಾದವರು ತಾವಿದ್ದ ಸಮಾಜದಲ್ಲಿ ವೈಯುಕ್ತಿಕ ಭದ್ರತೆಯನ್ನು ಕಳೆದುಕೊಂಡು ಇಂತಹ ಹೊಸ ವರ್ಗಗಳ ಸೃಷ್ಟಿಯಲ್ಲಿ ತನ್ನ ಇಡೀ ಪೀಳಿಗೆಯ ಭದ್ರತೆಯ ಕನಸು ಕಂಡು ಸೇರಿದವರು. ಹೀಗೆ ಬಾಣಲೆಯಿಂದ ಬೆಂಕಿಗೆ ನೆಗೆದವರು.

ಇಂದಿನ ಪರಿಸ್ಥಿತಿಯೂ ಸಹ ಇದಕ್ಕೆ ಹೊರತಾಗದಿರುವುದು ಇತಿಹಾಸದ ಸತ್ಯ. ಒಟ್ಟಿನಿಂದ ಸಿಗುವ ಅಧಿಕಾರ ಹಾಗೂ ಸವಲತ್ತುಗಳು ಒಂದಿಷ್ಟು ಸಂಘಟನೆಗಳನ್ನು ನಿರ್ಮಿಸಿದರೆ ತಮ್ಮನ್ನು ತಾವು ಕಾಪಾಡಿಕೊಳ್ಳುವ ಸಲುವಾಗಿ ಇನ್ನೊಂದಿಷ್ಟು ಸಂಘಟನೆಗಳು ರೂಪಿತಗೊಳ್ಳತೊಡಗಿದವು. ದೌರ್ಬಲ್ಯದ ನೆಪದಲ್ಲಿ ಮೂಡಿದ ಸಂಘಟನೆಗಳು ಓಟಿನ ಬ್ಯಾಂಕುಗಳಾದವು. ಇವರನ್ನು ಮೆಚ್ಚಿಸಲು ರೂಪಿತವಾದ ನೀತಿಗಳಿಂದ, ಸವಲತ್ತುಗಳಿಂದ ವಂಚಿತರಾದವರು ಹಾಗೂ ದೌರ್ಬಲ್ಯವನ್ನೇ ಶಕ್ತಿಯನ್ನಾಗಿಸಿಕೊಂಡವರಿಂದ ರಕ್ಷಣೆ ಪಡೆಯಲು ಪರ್ಯಾಯ ಸಂಘಟನೆಗಳು ಸಹ ರೂಪುಗೊಂಡವು. ಇದರಿಂದಾಗಿಯೇ ಇಲ್ಲಿ ಯಾವುದು ಸರಿ, ಯಾವುದು ತಪ್ಪು ಎನ್ನುವುದು ಮುಖ್ಯವಲ್ಲ. ಇಂತಹ ಆಂತರಿಕ ಅಭದ್ರತೆ ಹಾಗೂ ಅಸಮಾನತೆಗೆ ಪರ್ಯಾಯ ವ್ಯವಸ್ಥೆಯನ್ನು ಗುರುತಿಸಲು ಸಾಧ್ಯವಾಗದಿದ್ದುದು ಮುಖ್ಯವಾಗುತ್ತದೆ.

೨೩ ನೇ ಪುಟ ನೋಡಿ

ರೋಗಿ ಮತ್ತು ಮಾನವೀಯ ಸಂಬಂಧ

—ಕೆ. ಟಿ. ಷಡಕ್ಷರಿ

ನಮ್ಮ ಬದುಕಿನಲ್ಲಿ ಅನೇಕ ರೋಗಿಗಳನ್ನು ನೋಡಿರುತ್ತೇವೆ. ಅಥವಾ ನಾವೇ ಒಮ್ಮೆಯಾದರೂ ರೋಗಿಯಾಗಿರಲೂಬಹುದು. ಆಗ ನಮ್ಮ ಮಾನಸಿಕ ಸ್ಥಿತಿ ಹೇಗಿರುತ್ತದೆ ? ಇದಕ್ಕೆ ಉದಾಹರಣೆಯಾಗಿ ಒಂದು ಚಿತ್ರ ನಿಮ್ಮ ಕಣ್ಣ ಮುಂದೆ ಇಡುತ್ತೇನೆ. ಮೈಯಲ್ಲಾ ಹುಣ್ಣಾಗಿ ಕೀವು ಸೋರುತ್ತಿರುವ ಒಬ್ಬ ಮಧ್ಯಮ ವಯಸ್ಸಿನ ವ್ಯಕ್ತಿ, ಸೊರಗಿದ ಮುಖ ಭಾವ, ಮಲಿನವಾದ ಬಟ್ಟೆ, ಹೊದಿಕೆಯ ಮೇಲೆ ಹಾರಾಡುವ ನೋಣ! ಇಂಥವನನ್ನು ಆಕಸ್ಮಿಕವಾಗಿ ಭೇಟಿಯಾಗುವ ಪ್ರಸಂಗ ಬಂದಾಗ ? ಸ್ವಲ್ಪ ನೀಟಾದ ಬಟ್ಟೆ ಹಾಕಿದ ನಾವು ಮನಸ್ಸಿನಲ್ಲಿ ತಳಮಳಗೊಳ್ಳುತ್ತೇವೆ. ಅವನ ಬಗ್ಗೆ ಅನುಕಂಪದ ನುಡಿಯಾಡುತ್ತೇವೆ. ಅವನ ಈ ಸ್ಥಿತಿಗೆ ನಮ್ಮದೇ ಯೋಜನೆಯಿಂದ ಅಳತೆ ಹಾಕುತ್ತೇವೆ. ಪೂರ್ವ ಜನ್ಮದ ಕರ್ಮ ಫಲವೆಂದೊ, ಅಜ್ಞಾನದಿಂದ ಉಂಟಾದ ನಿರ್ಲಕ್ಷವೆಂದೋ ವಿಮರ್ಶೆಗೆ ತೊಡಗುತ್ತೇವೆ. ನಮ್ಮ ಎಲ್ಲಾ ಪ್ರತಿಕ್ರಿಯೆ ಆತನನ್ನು ವಿಶ್ಲೇಷಿಸುವುದರಲ್ಲೇ ಮುಗಿದು ಬಿಡುತ್ತದೆ. ಇದು ಸಾಮಾನ್ಯ ವರ್ಗದ ಒಂದು ಗುಂಪು ರೋಗಿಯನ್ನು ಕಾಣುವ ವಿಧಾನ.

ಇನ್ನೊಂದು ಬಗೆಯವರಿದ್ದಾರೆ. ಇವರಿಗೆ ರೋಗಿಯ ಬಗ್ಗೆ ಕನಿಕರವಿದೆ, ಅನುಕಂಪವಿದೆ. ಒಳಒಳಗೇ ಆತನ ಬಗ್ಗೆ ಯೋಚಿಸುತ್ತಾರೆ. ವ್ಯಥೆ ಪಡುತ್ತಾರೆ. ಆದರೆ ಇವರು ಅಸಹಾಯಕರು. ತಮ್ಮ ಮಿತಿಯೊಳಗೆ ಸಿಕ್ಕಿದ ದುರ್ಬಲರು. ರೋಗಿಯನ್ನು ಮುಟ್ಟಿ ಮಾತನಾಡಿಸುವ ಬಯಕೆ ಇದ್ದರೂ ತಮ್ಮ ಗೌರವಕ್ಕೆ ಧಕ್ಕೆ ಬರುತ್ತದೆ ಎಂದು ಭಯ ಪಡುತ್ತಾರೆ. ತಮ್ಮ ಪ್ರತಿಕ್ರಿಯೆಯನ್ನು ಹಣ ಕೊಡುವುದರ ಮೂಲಕವೂ, ಹಣ್ಣು ಕೊಡುವದರ ಮೂಲಕವೂ ಮಾಡಿ ತೃಪ್ತಿಪಟ್ಟುಕೊಳ್ಳುತ್ತಾರೆ. ಇದರಿಂದ ರೋಗಿಗೆ ತಾತ್ಕಾಲಿಕ ಸಂತೋಷ ಕೂಡ ಆಗುತ್ತದೆ.

ಇನ್ನು ರೋಗಿಯ ಸಂಬಂಧಿಗಳ ವರ್ತನೆ ರೋಗಿಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಇವರೇನಾದರೂ ಸ್ವಲ್ಪ ಅಸಹ್ಯ ಭಾವನೆ ತೋರಿದರಂತೂ ಮುಗಿಯಿತು. ದೈಹಿಕ ಯಾತನೆಯ ಜೊತೆಗೆ ಮಾನಸಿಕವಾಗಿಯೂ ಕೊರಗುತ್ತಾನೆ.

ದಿನದಿಂದ ದಿನಕ್ಕೆ ತನ್ನ ಬದುಕೇ ತನಗೆ ಭಾರವಾಗಿ ಕಾಣುತ್ತದೆ, ಆಗ ರೋಗ ವಾಸಿಯಾಗುವ ಸ್ಥಿತಿ ಇದ್ದರೂ ತನ್ನವರ ನಿರ್ಲಕ್ಷ್ಯ ಅವನನ್ನು ಬಲಾತ್ಕಾರವಾಗಿ ಸಾವಿನ ಕಡೆ ತಳ್ಳುತ್ತದೆ.

ಈ ಎಲ್ಲಾ ಚಿತ್ರಣದಿಂದ ನಾನು ಮುಖ್ಯವಾಗಿ ಹೇಳಬಯಸುವುದಿಷ್ಟು: ರೋಗಿಗೆ ರೋಗಕ್ಕಿಂತ ಮುಖ್ಯವಾಗಿ ಅವನ ಸುತ್ತಲಿನವರ ವರ್ತನೆ ಆತನ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.

ಮಾನವೀಯ ಸಂಬಂಧಗಳ ಸ್ಪಷ್ಟ ಪರಿಚಯವಾಗುವುದು ವ್ಯಕ್ತಿ ಕೆಳಗೆ ಬಿದ್ದಾಗಲೇ ಎಂದು ನನಗನ್ನಿಸುತ್ತದೆ. ಇದಕ್ಕೆ ಪೂರಕವಾಗಿ ಕಂಡ ಒಂದು ದೃಶ್ಯ ನೆನಪಾಗುತ್ತದೆ. ಸುಮಾರು ೬೦ ವಯಸ್ಸಿನ ವ್ಯಕ್ತಿ. ಇತನಿಗೆ ಹೆಂಡತಿ, ಮಕ್ಕಳು, ಸಾಕಷ್ಟು ಆಸ್ತಿ ಎಲ್ಲಾ ಇತ್ತು. ಎರಡು ಹೆಣ್ಣುಮಕಳು, ಒಂದು ಗಂಡು ಮಗ ಇದ್ದ ಈತನದು ಸುಖ ಸಂಸಾರವಾಗಿತ್ತು. ಆದರೆ ಜೀವನವು ಹಾಸುಮಣೆಯಂತೆ ಸಮತಟ್ಟಾಗಿಲ್ಲವಲ್ಲ! ಹೇಗೋ ಕ್ಷಯ ರೋಗಕ್ಕೆ ಬಲಿಯಾದ. ಈ ದಿನಗಳಲ್ಲಿ ಇದೇನೂ ಭಾರಿ ರೋಗವಲ್ಲ, ನಿಗಾವಹಿಸಿದರೆ ವಾಸಿಮಾಡಬಹುದು. ಮೊದಲು ರೋಗಿಯ ಬಗ್ಗೆ ಹೆಂಡತಿ ಮಕ್ಕಳೆಲ್ಲಾ ಕಾಳಜಿ ವಹಿಸುತ್ತಿದ್ದರು. ಆದರೆ ಈತನಿಗೆ ಟಿ. ಬಿ ಆಗಿದೆಯೆಂದು ಡಾಕ್ಟರು ಗುಟ್ಟನ್ನು ರಟ್ಟುಮಾಡಿದಾಗ ಎಲ್ಲರೂ ಅವಕ್ಕಾದರು. ಹೆಂಡತಿಗೆ ಈ ಕಾಯಿಲೆ ಬಗ್ಗೆ ಪೂರ್ವಾಗ್ರಹ ಕಲ್ಪನೆಗಳು ಇದುದ್ದರಿಂದ ಆತನಿಂದ ದೂರ ಆಗ ಹತ್ತಿದಳು. ಅವನ ಪ್ರತಿ ಚಲನವಲನಗಳು ಅಸಹ್ಯವಾಗಿ ಕಾಣ ಹತ್ತಿದವು. ಇದರಿಂದ ಆತನಿಗೆ ತುಂಬಾ ಆಘಾತವಾಯಿತು. ರೋಗ ದಿನದಿಂದ ದಿನಕ್ಕೆ ಉಲ್ಬಣವಾಗುತ್ತಾ ಹೋಯಿತು. ಮಕ್ಕಳನ್ನು ಆಕೆ ಹತ್ತಿರ ಬಿಡಗೊಡದಾದಳು. ಈ ಪ್ರಾಣಿ ಮನೆಯಲ್ಲಿ ಇದ್ದರೆ ತಮಗೆಲ್ಲಿ ರೋಗ ಬಡಿಯುತ್ತದೆಯೋ ಎಂಬ ಭಾವನೆಯಿಂದ ಸರಕಾರಿ ಆಸ್ಪತ್ರೆಗೆ ಸೇರಿಸಿ ಕೈತೊಳೆದುಕೊಂಡಳು. ಎಲ್ಲೋ ವಾರಕ್ಕೊಮ್ಮೆ ಬಂದು ದೂರದಲ್ಲಿ ನಿಂತು ಒಂದೆರಡು ಹಣ್ಣು ಕೊಟ್ಟು ಹೋಗುತ್ತಿದ್ದಳು. ಪ್ರೀತಿಯ ಒಂದೆರಡು ನುಡಿಗಳೂ ಆಕೆಯ ಬಾಯಿಂದ ಬರುತ್ತಿರಲಿಲ್ಲ. ಆ ರೋಗಿ ಇದೆಲ್ಲವನ್ನೂ ನನ್ನೊಂದಿಗೆ ಹೇಳಿಕೊಂಡು ಕಣ್ಣೀರಿಟ್ಟ. "ಪರವಾಗಿಲ್ಲ, ಆಕೆಗೆ ತಿಳುವಳಿಕೆ ಇಲ್ಲ. ರೋಗವಾಸಿಯಾದ ಮೇಲೆ ಸ್ಪಷ್ಟವಾಗಿ ಆಕೆಗೆ ಡಾಕ್ಟರ್ ಕಡೆಯಿಂದ ತಿಳುವಳಿಕೆ ಹೇಳಿಸೋಣ" ಎಂದು ಸಮಾಧಾನ ಮಾಡಿದೆ. ಇಂಥ ಭರವಸೆಯ ಮಾತುಗಳಿಂದ ಆತ ದಿನ ದಿನ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡ. ಮೂರು ತಿಂಗಳಾದ ಮೇಲೆ ಡಾಕ್ಟರಿಗೆ ಮನವಿ ಮಾಡಿಕೊಂಡು ಆಕೆಗೆ ರೋಗದ ಬಗ್ಗೆ ಎಲ್ಲಾ ರೀತಿಯ ತಿಳುವಳಿಕೆ ಹೇಳಿಸಿ ಡಿಸ್‌ಚಾರ್ಜ್ ಮಾಡಲಾಯಿತು.

ಮತ್ತೆ ಎರಡು ತಿಂಗಳು ಕಳೆಯುವುದರೊಳಗಾಗಿ ಆತ ಹಿಂದಿನ ಸ್ಥಿತಿಯಂತೆಯೇ ಮರಳಿ ಬಂದಾಗ ಆಶ್ಚರ್ಯವಾಯಿತು. ಒಂದೆರಡು ದಿನಗಳಾದ ಮೇಲೆ ಕಾರಣ ಕೇಳಿದಾಗ ಕತೆಯನ್ನು ಬಿಚ್ಚುತ್ತ ಹೋದ: ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ

ನಂತರ ಮನೆಯ ವಾತಾವರಣ ಪೂರ್ಣ ಬದಲಾಗಿಬಿಟ್ಟಿತ್ತು. ಈತನ ಹಾಸಿಗೆ ಬಟ್ಟೆಗಳೆಲ್ಲಾ ಪ್ರತ್ಯೇಕಗೊಂಡಿದ್ದವು. ತಟ್ಟೆ, ನೀರಿನ ಪಾತ್ರೆಗಳೂ ಕೂಡ. ಆಕೆಯ ನಡೆ ನುಡಿಗಳಲ್ಲಿ ತಿರಸ್ಕಾರ ಭಾವನೆಗಳು ಕಾಣತೊಡಗಿದವು. ಪರಿಸ್ಥಿತಿ ಇಷ್ಟೊಂದು ಬದಲಾದುದನ್ನು ರೋಗಿ ಸಹಿಸದಾದ. ಎಲ್ಲರ ಮೇಲೂ ಪ್ರತಿಭಟನೆ ತೋರಿಸ ತೊಡಗಿದ. ಹೇಳದೆ ಕೇಳದೆ ಅಡಿಗೆ ಮನೆಗೆ ನುಗ್ಗಿ ತಾನೇ ಬಡಿಸಿಕೊಳ್ಳುತ್ತಿದ್ದ. ತನಗೆ ಇಚ್ಛೆ ಬಂದ ಜಾಗದಲ್ಲಿ ಮಲಗಿದ. ಹೆಂಡತಿ ಮಕ್ಕಳಿಗೆಲ್ಲಾ ಹೊಡೆದ. ಇದರಿಂದ ಇಡೀ ಮನೆಯೇ ಕುರುಕ್ಷೇತ್ರವಾಯಿತು. ಈತನ ಹುಚ್ಚು ವರ್ತನೆಗೆ ಹೆದರಿ ಆಕೆಯ ತೌರಿನವರು ಬಂದು ಈತನನ್ನು ಒಂದು ಕೊಠಡಿಗೆ ಕೂಡಿ ಕಾಯಿಲೆಯೂ ಹುಚ್ಚಿಗೆ ತಿರುಗಿದೆಯೆಂದು ಅಪಪ್ರಚಾರ ಮಾಡಿದರು. ಆಗ ಇವನ ಮಾತಿಗೆ ಯಾರೂ ಬೆಲೆಗೊಡದಾದರು. ಸರಿಯಾದ ಊಟ, ಔಷಧಿ ಇಲ್ಲದೆ ಮತ್ತೆ ರೋಗಿಯಾದ.

ಈ ಘಟನೆಯ ಹಿಂದೆ ರೋಗಿಯ ತಪ್ಪು ಇರಬಹುದು. ಆದರೆ ಅದನ್ನು ಸ್ಪಷ್ಟಪಡಿಸಿ ಪ್ರೀತಿ, ವಾತ್ಸಲ್ಯದಿಂದ ನೋಡಿಕೊಂಡಿದ್ದರೆ ಆತ ಮತ್ತೆ ರೋಗಿಯಾಗುತ್ತಿರಲಿಲ್ಲ. ರೋಗಿ ಬಯಸುವುದು ಔಷಧಕ್ಕಿಂತ ಹೆಚ್ಚಾಗಿ ಪ್ರೀತಿ, ವಾತ್ಸಲ್ಯ. ರೋಗ ಬರುವುದು ಎಲ್ಲರಿಗೂ ಸಾಮಾನ್ಯ. ಆದರೆ ನನ್ನವರೆನಿಸಿಕೊಂಡ ಬಾಂಧವರು ರೋಗವನ್ನು ದ್ವೇಷಿಸಬೇಕೆ ಹೊರತು ರೋಗಿಯನ್ನಲ್ಲ.

ಒಂದು ಪಕ್ಷ ನಮಗೇ ಆ ಸ್ಥಿತಿ ಬಂದಾಗ ನಾವು ಬಯಸುವುದು ಏನನ್ನು? ನಮಗೆ ನಾವೇ ಕೇಳಿಕೊಂಡಾಗ ಉತ್ತರ ಸ್ಪಷ್ಟವಾಗುತ್ತದೆ. ರೋಗಿಯನ್ನು ಒಂದು ವಸ್ತುವನ್ನಾಗಿ ನೋಡದೆ, ಆತನಿಗೂ ಹೃದಯವಿದೆ, ಮನಸ್ಸಿದೆ ಎನ್ನುವುದನ್ನು ಅರಿಯಬೇಕು. ರೋಗ ಬಂದಾಕ್ಷಣ ಒಂದು ರೂಮಿಗೆ ಮಂಚ ಹಾಕಿ, ಹೊತ್ತಿಗೆ ಸರಿಯಾಗಿ ಊಟ, ಔಷಧಿ ಕೊಡುವುದು ಮುಖ್ಯವಲ್ಲ. ಅವರೊಂದಿಗೆ ನಾವು ಬೆರೆಯಬೇಕು. ಮತ್ತೊಬ್ಬರಿಗೆ ಹರಡುವ ಅಪಾಯಕಾರಿ ರೋಗವಾದರೆ ಅವರಿಗೆ ನೋವಾಗದ ರೀತಿಯಲ್ಲಿ ಗುಟ್ಟಾಗಿ ವರ್ತಿಸಬೇಕು. ಜೊತೆಯಲ್ಲಿ ವಾಕಿಂಗ್ ಮಾಡಿಸುವುದು, ಪುಸ್ತಕ, ರೇಡಿಯೋ, ಟಿ. ವಿ. ಯನ್ನು ನೋಡಲು ಹೇಳುವುದು. ಸಾಧ್ಯವಾದಷ್ಟು ಮನಸ್ಸು ಸದಾ ರೋಗದ ಬಗ್ಗೆ ಚಿಂತಿಸಲು ಬಿಡಬಾರದು. ಆಗ ರೋಗಿಗೆ ರೋಗ ಹೊರೆಯಾಗುವುದಿಲ್ಲ. ಇಂಥ ಉಲ್ಲಾಸದ ಪರಿಸ್ಥಿತಿಯಲ್ಲಿ ಬೇಗ ಗುಣವಾಗಲೂಬಹುದು. ನಾವು ಮಾನವೀಯ ಸಂಬಂಧಗಳನ್ನು ಅರ್ಥಮಾಡಿಕೊಂಡು ರೋಗಿಯ ಉಪಚಾರ ಮಾಡಿದಲ್ಲಿ ರೋಗ ಸಮಸ್ಯೆಯಾಗಿ ಉಳಿಯುವುದೇ ಇಲ್ಲ. ★

ಮನುಷ್ಯನ ಆತ್ಮವು ಬಲಿಷ್ಠವಾಗಬೇಕಾದರೆ
ಅದರಲ್ಲೊಂದು ಕಷ್ಟ ಸಿದ್ಧತೆ ಇರಬೇಕು.

— ಡಿ. ವಿ. ಜಿ.

ಜೀವನಶಿಕ್ಷಣ

— ಜೆ. ಸಿ. ಕುಮಾರಪ್ಪ

(ಜೆ. ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಸಲಾಗುತ್ತಿದೆ. ಅನುವಾದ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ–ಸಂ.)

ನಿಜವಾದ ಶಿಕ್ಷಣ ಹೇಗಿರಬೇಕು ಎಂದು ಈಚೆಗೆ ಬಹಳ ಚರ್ಚೆ ನಡೆದಿದೆ. ಶಿಕ್ಷಣ ಸ್ವಾವಲಂಬಿಯಾಗಿರಬೇಕೆಂದು ಗಾಂಧೀಜಿ ಹೇಳುತ್ತಾರೆ. 'ಶಿಕ್ಷಣ ವೆಂದರೆ ಮಗುವಿನಲ್ಲಿ, ಮನುಷ್ಯನಲ್ಲಿ – ದೇಹ, ಮನಸ್ಸು, ಆತ್ಮಗಳಲ್ಲಿ – ಇರುವ ಉತ್ತಮೋತ್ತಮ ಶಕ್ತಿಗಳನ್ನು ಸಮಗ್ರವಾಗಿ ವಿಕಸನಗೊಳಿಸುವುದು. ಅಕ್ಷರ ಪರಿಚಯ ಶಿಕ್ಷಣದ ಅಂತವೂ ಅಲ್ಲ, ಆದಿಯೂ ಅಲ್ಲ. ಗಂಡಸು ಹೆಂಗಸು ಶಿಕ್ಷಣ ಪಡೆಯಲು ಅಕ್ಷರ ಜ್ಞಾನವೂ ಒಂದು ಸಾಧನ. ಬರೀ ಅಕ್ಷರಜ್ಞಾನವೇ ವಿದ್ಯೆಯಲ್ಲ. ಆದುದರಿಂದ, ಶಿಕ್ಷಣಕ್ಕೆ ಮೊದಲಿಟ್ಟ ಗಳಿಗೆಯಿಂದಲೂ ಏನಾದರೂ ಉತ್ಪತ್ತಿ ಮಾಡುವಂತೆ ಮಗುವಿಗೆ ಒಂದು ಕೈಗಾರಿಕೆಯನ್ನು ಕಲಿಸುವುದೇ ಶಿಕ್ಷಣದ ನಾಂದಿ ಎನ್ನುತ್ತೇನೆ. ಪ್ರತಿಯೊಂದು ಪಾಠಶಾಲೆಯೂ ಸ್ವಾವಲಂಬಿಯಾಗಬೇಕು. ಅಲ್ಲಿ ಉತ್ಪತ್ತಿಯಾದುದನ್ನು ಸರಕಾರ ತೆಗೆದುಕೊಳ್ಳಬೇಕು.

'ಇಂಥ ಶಿಕ್ಷಣ ಪದ್ಧತಿಯಲ್ಲಿ ಮನಸ್ಸು–ಆತ್ಮಗಳ ಅತ್ಯುತ್ತಮ ವಿಕಾಸ ಸಾಧ್ಯವೆಂದು ನನ್ನ ಮತ. ಆದರೆ ಈಗ ಕಲಿಸುವಂತೆ ಯಾಂತ್ರಿಕವಾಗಿ ಕೈಗಾರಿಕೆಯನ್ನು ಕಲಿಸಬಾರದು. ಶಾಸ್ತ್ರೀಯವಾಗಿ ಕಲಿಸಬೇಕು. ಪ್ರತಿಯೊಂದು ಕ್ರಮದ ಬಗ್ಗೆಯೂ ಮಗುವಿಗೆ ಇದೇಕೆ, ಇದಲ್ಲಿಯದು ಎಂಬ ವಿವರಗಳು ತಿಳಿಯಬೇಕು. ಆತ್ಮವಿಶ್ವಾಸವಿಲ್ಲದೆ ನಾನಿದನ್ನು ಬರೆಯುತ್ತಿಲ್ಲ. ನನಗೆ ಅನುಭವವಿದೆ. ಕೆಲಸಗಾರರಿಗೆ ನೂಲುವ ಶಿಕ್ಷಣ ಕೊಡುವಲ್ಲೆಲ್ಲ ಈ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ.

ಈ ಪ್ರಕಾರ ನಾನೇ ಪೆಟ್ಟು ಹೊಲಿಯುವುದನ್ನೂ, ನೂಲುವುದನ್ನು ಕಲಿಸಿದೇನೆ. ಒಳ್ಳೆಯ ಫಲ ಬಂದಿದೆ. ಇದರಲ್ಲಿ ಇತಿಹಾಸ ಭೂಗೋಳಗಳ ಜ್ಞಾನವಿಲ್ಲದಿಲ್ಲ. ಆದರೆ ಬಾಯಿಮಾತಿನ ಮೂಲಕ ಆ ಜ್ಞಾನವನ್ನು ಹೇಳುವುದೇ ಉತ್ತಮ ಮಾರ್ಗ ವೆಂದು ನನಗೆ ಕಂಡು ಬಂದಿದೆ. ಓದು ಬರಹದ ಮೂಲಕ ಕಲಿಸುವುದಕ್ಕಿಂತ ಹತ್ತರಷ್ಟು ಹೆಚ್ಚಾಗಿ ಕಲಿಸಬಹುದು, ಈ ರೀತಿಯಲ್ಲಿ. ಅಕ್ಷರಗಳನ್ನು ಆಮೇಲೆ ಕಲಿಸಬಹುದು, ಮಗುವಿನ ಅಭಿರುಚಿ ಬೆಳೆದ ಮೇಲೆ. ಈ ಸೂಚನೆ ಕ್ರಾಂತಿಕಾರಿ. ಆದರೆ ಇದರಿಂದ ಅಪಾರ ಶ್ರಮ ಲಾಭವಾಗುತ್ತದೆ. ಹೆಚ್ಚು ಕಾಲದಲ್ಲಿ ಈಗ ಕಲಿಯುವುದನ್ನು ಹುಡುಗ ಒಂದೇ ವರ್ಷದಲ್ಲಿ ಕಲಿಯುತ್ತಾನೆ. ಇದರಿಂದ ಸರ್ವತ್ರ ಲಾಭ. ಕೈಗಾರಿಕೆ ಕಲಿಯುವಾಗಲೇ ಹುಡುಗ ಗಣಿತವನ್ನೂ ಕಲಿಯುತ್ತಾನೆ.

'ನನ್ನ ಮಟ್ಟಿಗೆ ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ. ಇಂಗ್ಲೀಷೊಂದನ್ನು ಬಿಟ್ಟರೆ ಇದು ಹೈಸ್ಕೂಲಿಗೆ ಸಮನಾಗಬೇಕು. ನಮ್ಮ ದೇಶದ ಪದವೀಧರರೆಲ್ಲ ಒಮ್ಮೆಲೇ ತಾವು ಓದಿದುದನ್ನೆಲ್ಲಾ ಮರೆತರೆ ಹಲವು ಲಕ್ಷ ಜನರ ಆ ಆಕಸ್ಮಿಕ ವಿಸ್ಮೃತಿ ಯಿಂದ ಆಗುವ ಪರಿಣಾಮಕ್ಕಿಂತ ನಮ್ಮ ಮೂವತ್ತು ಕೋಟಿ ಜನರನ್ನು ಕವಿದಿರುವ ಅಜ್ಞಾನಾಂಧಕಾರದ ಪರಿಣಾಮ ಘೋರತರವಾದುದು. ನಮ್ಮ ಕೋಟ್ಯಾಂತರ ಗ್ರಾಮಸ್ಥರ ಅಜ್ಞಾನಕ್ಕೆ ಅವರ ಅನಕ್ಷರತೆಯೊಂದು ಅಳತೆಯೆ ಅಲ್ಲ.

ಮಕ್ಕಳ ಶಿಕ್ಷಣ ಮೊದ ಮೊದಲು ಹಂತಗಳಲ್ಲಿ ಸ್ವಾವಲಂಬಿಯಾಗುವುದು ಸಾಧ್ಯವೇ ಇಲ್ಲ. ಅವರು ಮಾಡಿದ ಪದಾರ್ಥಕ್ಕೆ ಬೆಲೆ ಬಾರದು. ಅದನ್ನು ಸರಕಾರವೆ ತೆಗೆದುಕೊಂಡರೂ ಸುಮ್ಮನೆ ನಷ್ಟವನ್ನು ತುಂಬಿ ಕೊಟ್ಟಂತೆ. ಶಿಕ್ಷಣ ಸ್ವಾವಲಂಬಿಯಾಗಿದೆ ಎಂದು ನಾವು ಆತ್ಮವಂಚನೆ ಮಾಡಿಕೊಳ್ಳಲು ಒಂದು ಅವಕಾಶ. ಸ್ವಾವಲಂಬನವೆಂದರೆ ಮಗು ಆಯಾ ವರ್ಷ ಮಾಡಿದ ವೆಚ್ಚ ಬರಬೇಕು ಎಂದು ಗಾಂಧೀಜಿ ಹೇಳಲಿಲ್ಲ. ಇದು ಬಹಳ ಸಂಕುಚಿತ ಹಣದ ದೃಷ್ಟಿ. ಸಾರ್ಥಕವಾಗ ಲಾರದು. ಸ್ವಾವಲಂಬನ ಅರ್ಥ ವಿಶಾಲವಾಗಿದೆ. ಪಾಠಶಾಲೆಯಲ್ಲಿ ಮಗು ಮಾಡಿದ ಪದಾರ್ಥಗಳ ಬೆಲೆಯೊಂದೇ ಅಲ್ಲ, ಒಂದು ಸುಶಿಕ್ಷಿತ ಪೌರನಾದಾಗ ಅವನು ಮಾಡುವ ಸೇವೆಯೂ ಗಣನೀಯವೇ. ಈಗ ಹಳ್ಳಿಗಳಲ್ಲಿ ಮಗುವಿಗೆ ಸಿಗುವ ಅಕ್ಷರ ಶಿಕ್ಷಣವೂ ಅತ್ಯಲ್ಪ. ಕೆಲವು ವರ್ಷಗಳಾದ ಮೇಲೆ ಮತ್ತೂ ಅನಕ್ಷರಸ್ಥವಾಗುತ್ತದೆ. ಅದಕ್ಕೆ ವಿದ್ಯೆ ಕಲಿಸಲು ಕಳೆದ ಕಾಲ ಕೊಟ್ಟ ಹಣ ಎಲ್ಲವೂ ವ್ಯರ್ಥವಾಗುತ್ತದೆ. ಆ ಕಾಲ–ಹಣಗಳನ್ನು ಸರಿಯಾಗಿ ವಿನಿಯೋಗಿಸಿದ್ದರೆ, ಆಯಾ ತರಗತಿಯಲ್ಲಿ ಉತ್ಪತ್ತಿ ಮಾಡಿದ ಪದಾರ್ಥ ಆ ತರಗತಿಯ ವೆಚ್ಚಕ್ಕೆ ಸಾಲದಿದ್ದರೂ, ಒಟ್ಟು ಏಳು ವರ್ಷಗಳಲ್ಲಿ ಇಡೀ ತರಗತಿಗಳ ಉತ್ಪತ್ತಿ ಶಿಕ್ಷಕರ ವೆಚ್ಚಕ್ಕೆ ಸಾಕಾಗುತ್ತದೆ. ಮೊದಲ ಮೂರು ವರ್ಷ ಬರೀ ನಷ್ಟ, ಆಮೇಲೆ ಮೂರು ವರ್ಷ ಅಲ್ಲಿಗಲ್ಲಿಗೆ; ಮಗುವಿಗೆ ಸರಿಯಾದ ತರಬೇತು ದೊರೆತರೆ ಕಡೆಯ ಎರಡು ವರ್ಷಗಳಲ್ಲಿ ಲಾಭ ಬಂದು ಮೊದ ಲಿನ ಎರಡು ವರ್ಷಗಳ ನಷ್ಟವನ್ನು ಸರಿದೂಗಿಸುತ್ತದೆ. ಇದಕ್ಕಿಂತ ಹೆಚ್ಚಾಗಿ,

ಮಾಡುವ ಗುರಿಯಲ್ಲ; ಯಾವುದಾದರೂ ವೃತ್ತಿಯನ್ನು ಹಿಡಿದರೆ ಅದನ್ನು ಸರಿಯಾಗಿ ನಿರ್ವಹಿಸುವಷ್ಟು ಸಿದ್ಧತೆಯಿರಬೇಕು ಎಂಬುದು ಉದ್ದೇಶ.

ಈ ವಿಧವಾದ ಮುಖ್ಯ ಸಿದ್ಧಾಂತ ವೃತ್ತಿಶಿಕ್ಷಣದಲ್ಲಿಯೇ, ಅದರ ಮೂಲಕವೇ, ಬುದ್ಧಿಯ ವಿಕಾಸವೂ ಆಗಬೇಕು ಎಂಬುದು. ಈಗಿನ ಪದ್ಧತಿ ಬೌದ್ಧಿಕ ಶಿಕ್ಷಣಕ್ಕೆ ಮಹತ್ವವನ್ನು ಕೊಟ್ಟು ವೃತ್ತಿಶಿಕ್ಷಣವನ್ನು ಅದಕ್ಕೆ ಜೋಡಿಸುತ್ತದೆ. ಹೀಗೆ ಬೌದ್ಧಿಕ ಶಿಕ್ಷಣಕ್ಕೆ ಪ್ರಥಮ ಸ್ಥಾನ ಕೊಟ್ಟಾಗ ಮಗುವಿನ ಕೈಕಾಲು ಕಟ್ಟಿಹಾಕಿದಂತಾಗಿ ಅದು ಅವ್ಯವಹಾರಿಯಾಗುತ್ತದೆ. ಚಿಕ್ಕಂದಿನಲ್ಲಿ ಕಳೆದುಕೊಂಡ ಕೈಕಾಲು ಮುಂದೆ ಎಷ್ಟೇ ಸಾಹಸಪಟ್ಟರೂ ಬಾರದು. ಅನುಭವದ ಆಧಾರವಿಲ್ಲದ ಬರೀ ಕಲಿವು ಗಿಳಿಪಾಠವಾಗುತ್ತದೆ. ಜ್ಞಾಪಕ ಶಕ್ತಿಯ ವೃದ್ಧಿಯ ತರಬೇತಿ ಆಗುತ್ತದೆ. ಆದರಿಂದ ವ್ಯಕ್ತಿತ್ವವಾಗಲಿ ಸ್ಫೂರ್ತಿ (Initiative) ಅಭಿಕ್ರಮ ಶಕ್ತಿಯಾಗಲಿ ಬೆಳೆಯದು.

ಪರೀಕ್ಷೆಗಳು : ಈ ಪದ್ಧತಿಯಲ್ಲಿ ಪರೀಕ್ಷೆಯ ಪ್ರಯಾಸ ವಿದ್ಯಾರ್ಥಿಗಳಿಗಲ್ಲ, ಶಿಕ್ಷಕರಿಗೇ. ೨೪ ಗಂಟೆಯೂ ವಿದ್ಯಾರ್ಥಿಯ ಜೀವನ ಗುರುಗಳ ಮೇಲ್ವಿಚಾರಣೆ ಯಲ್ಲಿಯೆ ಇರುವುದರಿಂದ, ಮಕ್ಕಳ ಗೃಹಜೀವನಕ್ಕೂ ಗ್ರಾಮಜೀವನಕ್ಕೂ ಶಿಕ್ಷಕ ನಿಗೂ ನಿಕಟ ಸಂಬಂಧ ಬೆಳೆಯುತ್ತದೆ. ಮನೆಯಲ್ಲಿ, ಹಳ್ಳಿಯಲ್ಲಿ ಶಿಕ್ಷಕನ ಕೆಲಸದ ಪ್ರತಿಬಿಂಬ ಕಾಣಬರುತ್ತದೆ.

ಹೆಂಗಸರ ಪಾಲು : ಮಗುವಿನ ಸಹಜವಾದ ದೈಹಿಕ ವಿಕಾಸವನ್ನು ನಾವು ಅನುಸರಿಸಬೇಕು. ಬುದ್ಧಿ, ನೀತಿ, ಆತ್ಮ–ಎಲ್ಲದರಲ್ಲೂ ನಾವು ಅದನ್ನು ಅನುಸರಿಸ ಬೇಕು. ಮೊದಲು ಮಗು ಆಕಾರ, ಬಣ್ಣ, ಚಲನವಲನಗಳಲ್ಲಿ ಆಸಕ್ತಿಗೊಳ್ಳು ತ್ತದೆ. ಆಮೇಲೆ ಹೀಗೇಕೆ ಇವೆ, ಇವು ಏನು ಎಂದು ಕುತೂಹಲ ಪಡುತ್ತದೆ. ತರುವಾಯ ತಾನು ಬಯಸಿದ ರೀತಿಯಲ್ಲಿ ಏಕಿರಬಾರದು ಇವೆಲ್ಲ ಎಂದು ಯೋಚಿಸಿ ಹಾಗೆ ಪ್ರಯೋಗಮಾಡುತ್ತದೆ. ಹೀಗೆ ಮೊದಲು ಆಟ, ಆಮೇಲೆ ನಿರೀಕ್ಷೆ–ಪರೀಕ್ಷೆ, ತರುವಾಯ ರಚನೆ. ಪ್ರತಿಯೊಂದು ಮಗುವಿನ ಉತ್ತಮೋತ್ತಮ ವಿಕಾಸವಾಗ ಬೇಕು ಎಂದರೆ, ಬೆಳವಣಿಗೆಯ ಈ ಮೂರೂ ಮನೋಧರ್ಮಗಳಿಗೂ ಪುಷ್ಟಿಕೊಡ ಬೇಕು. ಇವನ್ನು ಮಾಡಲು ಶಿಕ್ಷಕನಿಗೆ ಶಿಶು ಮನೋಧರ್ಮ ಅರ್ಥವಾಗಿ ಅದರಲ್ಲಿ ತಾನು ಪ್ರವೇಶಮಾಡುವ ಶಕ್ತಿಬೇಕು. ಸ್ವಾಭಾವಿಕವಾಗಿಯೂ ನೈಸರ್ಗಿಕವಾಗಿಯೂ ಹೆಂಗಸರು ಸಾಧಾರಣವಾಗಿ ಈ ಮೊದಲನೆ ಹಂತದ ಮಕ್ಕಳನ್ನು ಚೆನ್ನಾಗಿ ಅರಿತು ಕೊಳ್ಳಬಲ್ಲರು. ಹೆಂಗಸರಲ್ಲಿ ವಿದ್ಯಾಭ್ಯಾಸವಿಲ್ಲದುದರಿಂದ ನಮ್ಮ ಶಿಕ್ಷಣ ಪದ್ಧತಿ ಬಹಳ ಕುಂಠಿತವಾಗಿದೆ. ತಾಯಿಗೆ ಮಗುವನ್ನು ಬೆಳೆಸಲು ತಕ್ಕ ಶಿಕ್ಷಣವಿಲ್ಲ. ವಿದ್ಯಾವತಿಯರು ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡಲು ಬರುತ್ತಿಲ್ಲ. ನಮ್ಮ ಪಾಠಶಾಲೆ ಗಳನ್ನು ಸುಧಾರಿಸಬೇಕೆಂದರೆ, ಮೊದಲು ನಮ್ಮ ಹುಡುಗಿಯರಿಗೆ, ಯುವತಿಯರಿಗೆ

ಶಿಕ್ಷಣವಾಗಬೇಕು. ಅವರೇ ಮುಂದಿನ ತಲೆಮಾರುಗಳ ಸಹಜ ಸಂರಕ್ಷಕಿಯರು. ಅಲ್ಲಿ ಪ್ರಾರಂಭಮಾಡದೆ ಗಂಡಸರೇ ಎಷ್ಟು ಯೋಜನೆ ಮಾಡಿದರೂ ವ್ಯರ್ಥವಾಗುತ್ತದೆ. ಮಗುವಿನ ಮೇಲೆ ಪ್ರಭಾವ ಬೀಳುವ ವಯಸ್ಸು ದಾಟಿದ ಮೇಲೆಯೆ ಗಂಡಸಿನ ಪ್ರವೇಶ. ಎಂಟು ವರ್ಷದೊಳಗಿನ ಮಕ್ಕಳ ಪಾಠಶಾಲೆಗಳೆಲ್ಲ ಹೆಂಗಸರ ಕೈಯಲ್ಲೇ ಇರಬೇಕು. ಸಾಧಾರಣವಾಗಿ. ಎಲ್ಲೋ ಅಪವಾದವಾಗಿ ಹೊರತು, ಗಂಡಸರು ಈ ಶಾಲೆಗಳಲ್ಲಿ ಇರಲೇಬಾರದು.

ಮಗುವಿನ ಬೆಳವಣಿಗೆಯ ಎರಡನೆ ಹಂತದಲ್ಲಿ ವಿದ್ಯಾರ್ಥಿಗಳ ವಿಚಾರ ಶಕ್ತಿಯನ್ನು ಪ್ರಚೋದನೆಮಾಡಿ, ಸನ್ನಿವೇಶದ ಏಕೆ, ಹೇಗೆಗಳಿಗೆ ಉತ್ತರಕೊಡುವ ವ್ಯಕ್ತಿಗಳು ಬೇಕು. ನ್ಯೂಯಾರ್ಕಿನಲ್ಲಿ ಲೇಬರ್ ಯೂನಿಯನ್ ಫೆಡರೇಷನ್‌ರವರು ನಡೆಸುತ್ತಿದ್ದ ಒಂದು ಶಾಲೆಗೆ ನಾನು ಹೋಗಿದ್ದೆ. ಅಲ್ಲಿ ಇಡೀ ಸಮಾಜವೇ ಒಂದು ಕುಟುಂಬವಾಗಿ ಬಾಳುತ್ತಿತ್ತು. ಆಹಾರದ ಉತ್ಪತ್ತಿಯಲ್ಲಿ, ಉಳಿದ ಕೌಟುಂಬಿಕ ಕಾರ್ಯಗಳಲ್ಲಿ ಮಕ್ಕಳು ಭಾಗವಹಿಸುತ್ತಿದ್ದರು. ಪಾಠಶಾಲೆಯದೇ ಒಂದು ಗೋಶಾಲೆ. ಒಬ್ಬ ಶಿಕ್ಷಕ ಅದನ್ನು ನೋಡಿಕೊಳ್ಳುತ್ತಿದ್ದ. ಕೆಲವರು ಹುಡುಗರು ಅವನಿಗೆ ಸಹಾಯಮಾಡುತ್ತಿದ್ದರು. 'ಅರ್ಥಶಾಸ್ತ್ರ ತರಗತಿ' ಒಂದಕ್ಕೆ ಹೋಗಿ ಕುಳಿತೆ. ವಿದ್ಯಾರ್ಥಿಗಳು ೧೧ ವರ್ಷದ ಕೆಳಗಿನವರು. ವಿಷಯ 'ಒಂದು ಹಸುವನ್ನು ಕೊಳ್ಳುವುದು'. ಹತ್ತು ವರ್ಷದ ಹುಡುಗನೊಬ್ಬ ತರಗತಿಯನ್ನು ನಡೆಸಿದ. ಶಿಕ್ಷಕ ನನ್ನ ಜೊತೆಗೆ ಹಿಂದೆ ಬಂದು ಕುಳಿತ. ಗೋಶಾಲೆಯ ವ್ಯವಸ್ಥಾಪಕ ಶಿಕ್ಷಕನ ಜೊತೆಯಲ್ಲಿ ಪಕ್ಕದ ಸಂತೆಗೆ ಒಂದು ಹಸುವನ್ನು ಕೊಳ್ಳಲು ಹೋಗಿದ್ದಾಗ ತನಗಾದ ಅನುಭವವನ್ನು ಆ ಹುಡುಗ ವಿವರಿಸಿದ. ಹೀಗಿತ್ತು ತರಗತಿ: 'ನಾವಿಬ್ಬರೂ ಸಂತೆಗೆ ಹಸುವನ್ನು ಕೊಳ್ಳಲು ಹೋದೆವು. ನಮ್ಮ ಹಸುಗಳು ಕೊಡುವ ಹಾಲು ನಮಗೆಲ್ಲರಿಗೂ ಸಾಲುವುದಿಲ್ಲ.' ಸಂತೆ ಎಂದರೇನು ಎಂದು ಕೇಳಿದ ಒಬ್ಬ ಹುಡುಗ. 'ಪದಾರ್ಥಗಳನ್ನು ಮಾರುವ ಸ್ಥಳ. ಅಲ್ಲಿ ನಿಗದಿ ಬೆಲೆ ಇಲ್ಲ. ಹೆಚ್ಚು ಬೆಲೆ ಕೊಟ್ಟವರಿಗೆ ಪದಾರ್ಥ ಸಿಗುತ್ತದೆ. ಪದಾರ್ಥಗಳನ್ನು ಹರಾಜು ಮಾಡುತ್ತಾರೆ.' ಹರಾಜು ಎಂದರೆ ? ಮತ್ತೊಂದು ಪ್ರಶ್ನೆ. ಅದಕ್ಕೆ ವಿವರಣೆ. ಒಬ್ಬೊಬ್ಬರು ಒಂದೊಂದು ಬೆಲೆಗೆ ಏಕೆ ಕೇಳುತ್ತಾರೆ' ಎಂಬುದು ಇನ್ನೊಬ್ಬನ ಪ್ರಶ್ನೆ. ಆ ಹುಡುಗ ಹೇಳಿದ: 'ಮೊಟ್ಟಮೊದಲು ೭೫ ರೂ ಬೆಲೆ ಪ್ರಾರಂಭ. ಕಡೆಗೆ ನಾವು ೧೨೫ ರೂ ಹೇಳಿ ತೆಗೆದುಕೊಂಡೆವು. ನಮ್ಮದೇ ಕಡೆಯ ಸವಾಲು'. ಕಡೆಯ ಸವಾಲು ಎಂದರೇನು? 'ಮೊದಲು ೭೫ ಹೇಳಿದನಲ್ಲ ಒಬ್ಬ. ಇನ್ನೊಬ್ಬ ಸ್ವಲ್ಪ ಹೆಚ್ಚು ಹೇಳಿದ. ಹೀಗೆ ಒಬ್ಬೊಬ್ಬರೂ ಹೆಚ್ಚು ಬೆಲೆ ಹೇಳಿ, ಇನ್ನಾರಾದರೂ ಇದೀರೋ ಹೆಚ್ಚು ಕೊಡುವವರು ಎಂದು ಸವಾಲು ಹಾಕುತ್ತಾನೆ. ನಾವು ೧೨೫ ರೂ ಹೇಳಿದ ಮೇಲೆ ಯಾರೂ ಮರು – ಸವಾಲು ಹಾಕಲಿಲ್ಲ. ಆದುದರಿಂದ ಹಸು ನಮಗೆ ಬಂತು.' ೧೨೫ಕ್ಕೆ ಹೆಚ್ಚಾಗಿ ಯಾರೂ ಏಕೆ ಕೇಳಲಿಲ್ಲ? ಆ ಹುಡುಗ ವಿವರವಾಗಿ ಹೇಳಿದ: 'ಹರಾಜಿಗೆ ಮೊದಲೇ ಆ ಹಸುವಿನ ವಿವರಣಾ ಪತ್ರಿಕೆಯನ್ನು

ನೋಡಿದರು. ವರ್ಷಕ್ಕೆ ಎಷ್ಟು ಹಾಲು ಕೊಡುತ್ತದೆ, ಅದರ ತಿಂಡಿಯ ವೆಚ್ಚ ಎಷ್ಟು, ಉಳಿದ ವೆಚ್ಚ ಏನು? ಇದಕ್ಕೆ ಇಷ್ಟು ಬೆಲೆ ಕೊಟ್ಟರೆ ಅದು ಕೊಡುವ ಹಾಲಿಗೆ ಸರಿ ಹೋಗುತ್ತದೆ ಎಂದು ತೀರ್ಮಾನಿಸಿಕೊಂಡಿದ್ದರು. ಈ ಲೆಕ್ಕವನ್ನು ಮುಟ್ಟಿದ ಮೇಲೆ ಯಾರೂ ಹೆಚ್ಚಿಗೆ ಕೇಳಿರು.' ಈ ರೀತಿ ಮಕ್ಕಳು ಈ ವಿವರ ಗಳನ್ನು ಅರಿತುಕೊಳ್ಳಲು ಕಳೆದ ಒಂದು ಗಂಟೆಯ ಕಾಲ ದೊಡ್ಡ ಅರ್ಥಶಾಸ್ತ್ರವೇತ್ತರ ಸೂತ್ರಗಳ ಬಾಯಿಪಾಠ ಮಾಡುವುದಕ್ಕಿಂತ ಹೆಚ್ಚು ವಿಚಾರ ಪ್ರಚೋದಕವೂ ಬೋಧ ಪ್ರದವೂ ಆಗಿತ್ತು. ತತ್ವಕ್ಕೆ ಅನುಭವ ಜೊತೆಯಾದರೆ, ಅನುಭವದಿಂದ ತತ್ವ ತಿಳಿದರೆ, ಮುಂದಿನ ಹೆಜ್ಜೆ–ಸ್ವಂತ ರಚನೆ, ಕಲ್ಪನೆ.

ಈಗಿನ ಪದ್ಧತಿಯಲ್ಲಿ ಪ್ರತಿಭಾವಂತರೂ ಕಲ್ಪನಾಚತುರರೂ ಹುಟ್ಟುವುದು ಸಾಧ್ಯವಿಲ್ಲ. ನಮ್ಮ ವಿಶ್ವವಿದ್ಯಾನಿಲಯಗಳ ಪದವೀಧರರು ಕೂಡ ಈ ಮೂರನೆಯ ಹಂತಕ್ಕೆ ಬಂದಿಲ್ಲ. ಈ ದೋಷದಿಂದಲೇ ನಾವು ತೇಜೋಹೀನರಾಗಿದೇವೆ. ನಮ್ಮನ್ನು ಗುಮಾಸ್ತೆಗಳಾಗಿ ಮಾಡಲು ಬಂದುದು ಈ ವಿದ್ಯೆ. ಅದಕ್ಕೆ ವಿಚಾರ ಕಲ್ಪನೆ ಏಕೆ? ಈ ಹಂತಕ್ಕೆ ಸ್ವಲ್ಪ ಅಭಿಕ್ರಮ, ಹೆಚ್ಚು ಆತ್ಮವಿಶ್ವಾಸ ಬೇಕು. ಇಲ್ಲಿ ಶಿಕ್ಷಕರು ಮಾಡಬೇಕಾದುದು ಪಕ್ಕದಲ್ಲಿ ನಿಂತು ನಿರೀಕ್ಷಿಸುವುದು, ಸಲಹೆ ಮಾಡುವುದು.

ಕಲಾದೃಷ್ಟಿಯಿಲ್ಲದ ವೃತ್ತಿ-ಶಿಕ್ಷಣ ಅಥವಾ ಶಿಕ್ಷಣ ಅಪೂರ್ಣ. ಶಿಕ್ಷಣಕ್ಕೂ ಕಲೆಗೂ ನಿಕಟ ಸಂಬಂಧ. ಕವೀಂದ್ರ ರವೀಂದ್ರರು ಈ ಅಂಶಕ್ಕೆ ಹೆಚ್ಚು ಗಮನ ಕೊಟ್ಟರು. ಪ್ರತಿಯೊಂದು ಗ್ರಾಮಶಾಲೆಯಲ್ಲಿಯೂ ಜನಪದ ಗೀತೆ, ಸಂಗೀತ, ಚಿತ್ರಕಲೆಗಳಿಗೆ ಒಂದು ಮುಖ್ಯ ಸ್ಥಾನವಿರಲೇಬೇಕು. ಮೂಲೋದ್ಯೋಗವೊಂದು ಮಾಧ್ಯಮವಾಗಿ, ಕಲೆ ಅದಕ್ಕೆ ಅಂಗವಾಗಿ ಒಂದು ಪಾಠಶಾಲೆಯನ್ನು ನಡೆಸಿದರೆ ಆ ಪಾಠಕ್ರಮ ಎಷ್ಟೇ ಸರಳ, ಸುಲಭ ಆಗಿರಲಿ ಗುಣವಂತರಾದ, ದೃಢಶೀಲರಾದ ಸ್ತ್ರೀಪುರುಷರು ಅಲ್ಲಿ ರೂಪುಗೊಂಡಾರು. ಸುಖಭೋಗದ ಆಸೆಗೆ ಪರಕೀಯರ ಕಾಲಿಗೆ ಬಿದ್ದು ಹೊರಳಾಡದೆ, ಸ್ವತಂತ್ರವಾಗಿ ಎದೆ ಸೆಟೆದು, ತಲೆಯೆತ್ತಿ ನಿಂತು ಜನತೆಯ ಜೀವನದಲ್ಲಿ ಬೆರೆತು ಕಷ್ಟ ಸಹಿಸಿಯಾರು. ಇಂಥ ದೃಢ ಧೀರ ಜನಾಂಗ ವನ್ನು ನಿರ್ಮಿಸಲು ನಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸದಿದ್ದರೆ, ಜನತೆಯ ಸಂಸ್ಕೃತಿಯ ಆಧಾರದ ಮೇಲೆ ರಾಷ್ಟ್ರವನ್ನು ಕಟ್ಟದಿದ್ದರೆ, ಬರೀ ಕಂಬ ಥಾವಣಿ ಕಟ್ಟಿ ಏನು ಲಾಭ? ತನ್ನದೇ ಆದ ಸಂಸ್ಕೃತಿಯಲ್ಲಿ ಬೆಳೆದುಬಾರದ ಯಾವ ರಾಷ್ಟ್ರವೂ ಮುಂಬರಿದು, ಜನಾಂಗಗಳ ನಡುವೆ ನಿಲ್ಲಲಾರದು. ಎರವಲು ಪುಕ್ಕದಿಂದ ಹಾರಲು ಬಂದೀತೆ? ಸಾಹಿತ್ಯ ಸಂಗೀತ ಕಲೆಗಳಿಗೆ ನಮ್ಮದೆ ಕಾಣಿಕೆ ಸಲ್ಲಬೇಕು.

ಗಾಂಧೀಜಿ ಹೇಳಿದಂತೆ ಉನ್ನತ ಶಿಕ್ಷಣ (ಕಾಲೇಜು) ತನ್ನ ವೆಚ್ಚವನ್ನು ತಾನೇ ನಿರ್ವಹಿಸಬೇಕು. ತನ್ನ ಹೊಲದಿಂದ ತಾನು ನಿರ್ವಹಿಸಲಾರದ ವ್ಯವಸಾಯ ಕಾಲೇಜು ವ್ಯರ್ಥ. ಅದರ ಹೆಸರಿಗೇ ಕಳಂಕ. ಎಲ್ಲ ವೃತ್ತಿಶಿಕ್ಷಣ ಶಾಲೆಗಳೂ ಯಂತ್ರವಿಜ್ಞಾನ ಶಾಲೆಗಳೂ ಅಷ್ಟೇ; ತಮ್ಮ ವೆಚ್ಚವನ್ನು ತಾವೇ ಗಳಿಸಬೇಕು.

ಕ್ಯುಪಿಡ್ ಮತ್ತು ಸ್ಸೈಕಿ

ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿದ್ದ. ಅವನಿಗೆ ಮೂರುಜನ ಹೆಣ್ಣು ಮಕ್ಕಳು. ಮೂವರೂ ಚೆಲುವೆಯರೇ. ಆದರೆ ಕಿರಿಯವಳು ಸ್ಸೈಕೀ ಬಲು ಚೆಲುವೆ. ಚೆಲುವಿನ ದೇವತೆ ವೀನಸ್‌ಗಿಂತಲೂ ಚೆಲುವೆ. ಅವಳ ಚೆಲುವಿನ ಕೀರ್ತಿ ಎಲ್ಲೆಡೆ ಹರಡಿತು. ಅವಳನ್ನೊಮ್ಮೆ ನೋಡಿದರೇ ಜನ್ಮ ಸಾರ್ಥಕವೆಂದು ಜನ ಅಂದರು. ವೀನಸ್‌ನ ದೇವಾಲಯಗಳಿಗೆ ದೀಪಗಂಧ ಹಚ್ಚುವರಿಲ್ಲದೇ ಅವು ಹಾಳು ಬಿದ್ದವು. ಸಾವು ತಬ್ಬುವ ಮನುಷ್ಯ ಪ್ರಾಣಿಗೆ ಈ ಕೀರ್ತಿ ಬಂದರೆ ದೇವತೆಗೆ ಅಸೂಯೆಯಾಗದಿದ್ದೀತೇ?

ವೀನಸ್ ಮಗ ಕ್ಯುಪಿಡ್ ಪ್ರೀತಿಯ ದೇವ ಮನ್ಮಥ. ಆತನೋ ಸುರ ಸುಂದರ. ಕಣ್ಣು ಮಿಟುಕಿಸಿ ಬಾಣ ಹೂಡಿದನೆಂದರೆ, ತಗುಲಿದ ವ್ಯಕ್ತಿ ಪ್ರೇಮ ಜ್ವರಕ್ಕೆ ತುತ್ತಾದಂತೇ. ವೀನಸ್ ಮಗನನ್ನು ಕರೆದು ಹೇಳಿದಳು. "ಮಗನೇ, ಈ ಚೆಲುವೆ ಜಗತ್ತಿನ ಕೊಳಕು ಪ್ರಾಣಿಯೊಂದರ ಜೊತೆ ಪ್ರೀತಿಗೆ ಸಿಲುಕುವಂತೆ ಮಾಡು." ಮಾಂತ್ರಿಕ ಮನ್ಮಥ ಹೆದೆ ಹೂಡಿ ಸ್ಸೈಕಿಯನ್ನೊಮ್ಮೆ ನೋಡಿದ ತನ್ನ ಬಾಣ ತನಗೇ ನೆಟ್ಟಂತಾಯಿತು.

ಏನಾಯಿತೆಂದರೆ, ಸ್ಸೈಕಿ ಯಾವುದೇ ಕುರೂಪಿಯ ಪ್ರೀತಿಗೆ ಸಿಲುಕಲಿಲ್ಲ. ಎಲ್ಲಾ ಗಂಡಸರೂ ಅವಳನ್ನು ನೋಡಿ ನಿಬ್ಬೆರಗಾಗುವರು. ಇನ್ಯಾರನ್ನೋ ಮದುವೆ ಯಾಗುವರು. ಅವಳ ಅಕ್ಕಂದಿರು ರಾಜರನ್ನು ಮದುವೆಯಾದರೂ, ಈ ಚೆಲುವೆಗೆ ಮದುವೆಯೇ ಇಲ್ಲ. ಬೇಸರದಲ್ಲಿ ಏಕಾಂಗಿಯಾಗಿ ಸ್ಸೈಕಿ ಕೂತಳು.

ಚಿಂತೆಗೊಂಡ ಹೆತ್ತವರು ಅಪೊಲೋನ ಮೊರೆಹೊಕ್ಕರು, ಮನ್ಮಥ ಕ್ಯುಪಿಡ್ ಅಪೊಲೋನಲ್ಲಿ ಮೊದಲೇ ಈ ಬಗ್ಗೆ ಹೇಳಿ ಸಹಾಯ ಕೋರಿದ್ದ. ಅದರಂತೆ ಅಪೊಲೋ ಹೇಳಿದ ಮಾತುಗಳು ಹೆತ್ತವರನ್ನು ಇರಿದವು. "ಶೋಕ ವಸ್ತ್ರಗಳಲ್ಲಿ ಅಲಂಕರಿಸಿ, ಬೆಟ್ಟದ ಕೋಡುಗಲ್ಲ ತುದಿಯಲ್ಲಿ ಇವಳನ್ನು ಬಿಟ್ಟು ಬಿಡಿ. ಅಲ್ಲಿ ಅವಳ ಗಂಡ ರೆಕ್ಕೆಗಳ ಸರ್ಪ, ದೇವತೆಗಳಿಗಿಂತಲೂ ಬಲಶಾಲಿ ಬಂದು ಅವಳನ್ನೊಯ್ಯುವನು"

ಅಳು ತುಂಬಿದ ಕಣ್ಣುಗಳಿಂದ ಅವಳ ಹೆತ್ತವರು ಅವಳನ್ನು ಕೋಡುಗಲ್ಲ ಬಳಿ

ಬಿಟ್ಟರು. "ಧೈರ್ಯ ತಾಳು ಮಗಳೇ'' ಅಂದರು. "ಓ! ನನ್ನ ಸೌಂದರ್ಯವು ದೇವತೆಗಳ ಅಸೂಯೆಗೆ ತುತ್ತಾಯಿತು. ಸಾವು ಬಂತೆಂಬುದೇ ನನಗೆ ತೃಪ್ತಿ'' ಎಂದು ಸೈಕೀ ನಿಟ್ಟುಸಿರುಬಿಟ್ಟಳು.

ಬೆಟ್ಟದ ಕೋಡುಗಲ್ಲ ತುದಿಯಲ್ಲಿ, ಕತ್ತಲ ಏಕಾಂಗಿತನದಲ್ಲಿ ಸೈಕಿ ಭೀಕರ ಅತಿಥಿಗಾಗಿ ಕಾದಳು. ಅತ್ತಳು, ನಡುಗಿದಳು. ಆಗ ಮೆಲುಗಾಳಿ ಮೆತ್ತನೆ ಅವಳನ್ನೆತ್ತಿ ಒಯ್ದು ಹೂ ತುಂಬಿದ ಮೆತ್ತನೆಯ ಹುಲ್ಲಮೇಲೆ ಇಳಿಸಿತು. ತಂಗಾಳಿಗೆ ಚೆಲುವೆ ನಿದ್ದೆಹೋದಳು. ಎದ್ದಾಗ ನದೀ ತಟದ ಜುಳುಜುಳು ಸದ್ದು, ಅದರ ಬಳಿಯೇ ಒಂದು ಅರಮನೆ. ಚಿನ್ನದ ಸ್ತಂಭ, ಬೆಳ್ಳಿಯ ಗೋಡೆ. ಅಮೂಲ್ಯ ಶಿಲೆಗಳ ಚಿತ್ತಾರ. ಅಚ್ಚರಿಗೊಂಡಿದ್ದ ಸೈಕಿ ಅಳುಕುತ್ತಾ ಮೆಲ್ಲ ಮೆಲ್ಲನೆ ಹೆಜ್ಜೆಯಿಡುತ್ತಾ ಒಳಹೊಕ್ಕಳು. ''ನಾವು ನಿನ್ನ ಸೇವಕರು, ನಿನ್ನ ಇಚ್ಛೆಯೇನು ಒಡತಿ" ಧ್ವನಿಗಳು ಮೆಲುವಾಗಿ ಸೈಕಿಯನ್ನು ಕೇಳಿದವು. ಸೈಕಿ ಮಗು ಮನಸ್ಸಿನ ಖುಷಿಯಲ್ಲಿ ನಲಿದಳು, ಮಿಂದಳು, ಉಂಡಳು. ಸಂಗೀತ ಝೇಂಕರಿಸಿತು. ಎಲ್ಲೆಡೆ ಧ್ವನಿಗಳು. ಎಲ್ಲೂ ದೇಹಗಳಿಲ್ಲ. ಯಾಕೋ, ಈ ರಾತ್ರಿ ತನ್ನ ಪತಿ ಬರುವನೆಂದು ಗ್ರಹಿಸಿದಳು. ರಾತ್ರಿ ತನ್ನ ಪಕ್ಕ ಮೆತ್ತನೆ ಮಲಗಿದ ದೇಹವನ್ನು ಭಯದಿಂದ ಮುಟ್ಟಿದಳು. ಸರ್ಪವೂ ಅಲ್ಲ, ವಿಕೃತ ಪ್ರಾಣಿಯೂ ಅಲ್ಲ. ಕನಸಲ್ಲಷ್ಟೇ ತಡವಬಹುದಾದ ದಿವ್ಯ ದೇಹ. ಆತ ತಬ್ಬಿದ, ಮುದ್ದಾಡಿದ, ಮುತ್ತುಗಳ ಮಳೆಗರೆದ, ಆಲಿಂಗನದಲ್ಲಿ ಆವರಿಸಿದ. ಸೈಕೀ ಸುಖದಲ್ಲಿ ತೋಯ್ದಳು. ಹೀಗೇ ದಿನಗಳೆಯಿತು. ರಾತ್ರಿ ಗಾಳಿಯಂತೆ ಬಂದು ಸೇರುವ ಪತಿ. ಕಾಣದ ಗಂಡು ಇವನಾರು?

ಒಂದು ದಿನ ಆತ ಎಚ್ಚರಿಸಿದ. "ನಿನ್ನ ಅಕ್ಕಂದಿರ ರೂಪದಲ್ಲಿ ನಿನಗೆ ಅಪಾಯ ಕಾದಿದೆ" ಎಂದ. "ನೀನು ಕಣ್ಮರೆಯಾದ ತಾಣಕ್ಕೆ ನಿನಗಾಗಿ ಅಳಲು ಬರುತ್ತಾರೆ. ನೀನವರಿಗೆ ಕಂಡರೆ ನನಗೆ ವಿಪತ್ತು, ನಿನಗೆ ದುಃಖ ಖಚಿತ" ಎಂದ. ಮಾರನೆಯ ದಿನವಿಡೀ ತನಗಾಗಿ ಅಳುವ ಅಕ್ಕಂದಿರನ್ನು ನೆನೆದು ಸೈಕೀ ಅತ್ತಳು. ರಾತ್ರಿ ಸ್ಪರ್ಶಗೋಚರ ಗಂಡ ಬಂದಾಗ ಎದೆಗೊರಗಿ ಅತ್ತಳು. "ನಿನಗೆ ಸರಿ ಕಂಡಂತೆ ಮಾಡು. ಆದರೆ ನಿನ್ನ ನಾಶದ ಹೆಜ್ಜೆ ಇದು" ಎಂದು ದುಃಖದಿಂದ ಎಚ್ಚರಿಸಿದ. "ಯಾರೂ ನ ್ನನ್ನು ನೋಡಕೂಡದು. ನೀನೂ ಕೂಡಾ. ಹಾಗಾದಲ್ಲಿ ನಾವಿಬ್ಬರೂ ಶಾಶ್ವತವಾಗಿ ದೂರವಾಗುತ್ತೇವೆ" ಎಂದ.

ಮಾರನೇ ದಿನ ಅಕ್ಕಂದಿರು ಬರುವಾಗ್ಗೆ ಸೈಕೀ ಅಲ್ಲಿದ್ದಳು. ಎಷ್ಟು ಕಾಲವಾಗಿತ್ತು ನೋಡದೇ. ತಬ್ಬಿ, ಮಾತಿಲ್ಲದೇ ಮಮತೆ ಹಂಚಿಕೊಂಡರು. ಅವಳ ಅಕ್ಕಂದಿರು ಅರಮನೆಗೆ ಬಂದರು. ದೈವೀ ಸಂಪತ್ತನ್ನು ನೋಡಿದರು. ಪ್ರೀತಿಯಿದ್ದಲ್ಲಿ ಅಸೂಯೆ ಹೆಡೆಯಾಡಿತು. "ಈ ವೈಭವದ ಒಡೆಯನಾರು? ತಂಗೀ, ನಿನ್ನ ಚೆಲುವನಾರು?" ಎಂದು ಪದೇ ಪದೇ ಕೇಳಿದರು. "ಅವನಿಲ್ಲ ಇಲ್ಲಿ. ಬೇಟೆಗೆ ಹೋಗಿದ್ದಾನೆ'' ಎಂದೆಲ್ಲ ಸೈಕಿ ಸುಳ್ಳು ಹೊಸೆದಳು. ಅಕ್ಕಂದಿರಿಗೆ ಅಮೂಲ್ಯ

ಆಭರಣಗಳ ಉಡುಗೊರೆ ಕೊಟ್ಟಳು. ಅವರು ಪ್ರೀತಿಯಿಂದ ಬಂದವರು ಅಸೂಯೆ ಯಿಂದ ಮರಳಿದರು.

ಆ ರಾತ್ರಿ ಆತ ಮತ್ತೆ ಎಚ್ಚರಿಸಿದ. ಅಕ್ಕಂದಿರು ಮತ್ತೆ ಬಂದರು. ಈ ಬಾರಿ ಸೈಕಿಯು ಬಾಳು ಮುರ್ದೆಸೆಮಾಡಲು ಪಣತೊಟ್ಟು ಬಂದರು. ಇವಳು ಗಂಡ ನನ್ನು ಕಂಡೇ ಇಲ್ಲ, ಅವನಾರೆಂದು ಇವಳಿಗೆ ಗೊತ್ತಿಲ್ಲ. "ಅಪೊಲೋನ ಭವಿಷ್ಯವಾಣಿ ನಿನಗೆ ಗೊತ್ತಾ? ನಿನ್ನ ಗಂಡ ಸುಂದರನಲ್ಲ. ಭೀಕರ ರೆಕ್ಕೆಗಳ ಸರ್ಪ. ಒಂದು ದಿನ ನುಂಗುತ್ತಾನೆ ನಿನ್ನ ಜೀವ ಸಹಿತ" ಎಂದು ಹೆದರಿಸಿದರು.

ಸಂಶಯ, ಭಯ ಸೈಕಿಯ ಮನ ಕೊರೆಯ ತೊಡಗಿತು. "ನನ್ನ ನಲ್ಲ ಯಾಕೆ ಮುಖ ತೋರಲೊಲ್ಲ? ಏನೋ ಭೀಕರ ಕಾರಣವಿರಬೇಕು. ನನಗೆ ಅವನ ಬಗ್ಗೆ ನಿಜಕ್ಕೂ ಏನೂ ಗೊತ್ತಿಲ್ಲ. ಬೆಳಕು ನೋಡಲೊಲ್ಲದ ನನ್ನ ಗಂಡನ ವರ್ತನೆಗೇನು ಕಾರಣ?" ಪ್ರಶ್ನೆ ಆತಂಕಗಳ ಭಾರಕ್ಕೆ ಸೈಕಿ ಕುಸಿದು ಅತ್ತಳು.

ಅಕ್ಕಂದಿರು ಬಂದದ್ದೇ ಆ ಸಲಹೆ ನೀಡಲು. "ಈ ರಾತ್ರಿ ಹರಿತ ಚಾಕು, ಪ್ರಖರ ದೀಪ ಬಳಿ ಇಟ್ಟುಕೋ. ಅವ ನಿದ್ದೆ ಹೋದದ್ದೇ ದೀಪ ಹಚ್ಚಿ ನೋಡು. ಭೀಕರ ಪ್ರಾಣಿಯಾದಲ್ಲಿ ಉಕ್ಕಿನ ಮನಸ್ಸಲ್ಲಿ ಹರಿತ ಚಾಕುವಿನಿಂದ ಇರಿದು ಬಿಡು. ಪೀಡೆ ತೊಲಗಲಿ'' ಎಂದರು. ಹೊರಟು ಹೋದರು. ಸೈಕಿಯ ಮನಸ್ಸು ತುಯ್ಯ ತೊಡಗಿತು. ಒಂದು ದಿನವೂ ನೋಯಿಸದೇ ಸುಖದಲ್ಲಿ ತೋಯಿಸಿದ ನನ್ನ ಗಂಡ, ಅವನ ನೆನಪೇ ಪುಳಕ ತರುವಂಥಾದ್ದು – ಇಲ್ಲ ಆತ ಭೀಕರ ಅಸಹ್ಯ ಸರ್ಪ. ಕೊಲ್ಲಲೇ, ಛೇ". ಸಂಜೆಗೆ ನಿರ್ಧರಿಸಿದಳು. "ನಾನು ಅವನನ್ನು ನೋಡಲೇಬೇಕು."

ರಾತ್ರಿ ಆತ ಸುಖ ನಿದ್ರೆಯಲ್ಲಿದ್ದಾಗ ಬೆಕ್ಕಿನ ಹೆಜ್ಜೆಯಲ್ಲಿ ನಡೆದು ದೀಪ ತಂದಳು. ಅವನ ಮುಖವ ನೋಡಿದಳು. ಓಹ್ ಭೀಕರ ಪ್ರಾಣಿಯಲ್ಲ. ಬದಲು ಅತಿ ಚೆಲುವ. ಪುರುಷಸೌಂದರ್ಯ ಮಲಗಿದೆ ಹಾಸಿಗೆಯಲ್ಲಿ. ಇಷ್ಟು ದಿನ ತನಗೆ ಅಲೌಕಿಕ ಸುಖ ನೀಡಿದ ಚಲುವ. ಸೈಕಿಯ ಎದೆ ತುಯ್ಯತೊಡಗಿತು. ಉಸಿರು ಬಿಗಿಯಿತು. ತನ್ನ ಕಣ್ಣುಗಳಲ್ಲಿ ಅವನ ದಿವ್ಯ ಚೆಲುವ ತುಂಬಿಕೊಳ್ಳತೊಡಗಿದಳು. ಸಣ್ಣದೆ ನಡುಗತೊಡಗಿದಳು. ಆಗ ದೀಪದ ಬಿಸಿ ಎಣ್ಣೆಯ ತೊಟ್ಟೊಂದು ಆ ಚೆಲುವನ ಹೆಗಲು ಸುಟ್ಟಿತು. ತಟಕ್ಕನೆ ನೋವಿಂದ ಎದ್ದ ಆತ ಬೆಳಕ ನೋಡಿದ. ಈ ಹೆಣ್ಣ ನಂಬುಗೆ ದ್ರೋಹವ ಕಂಡ. ಮಾತಿಲ್ಲದೇ ಬಾಗಿಲಿಂದಾಚೆ ಓಡಿ ಮಾಯ ವಾದ. ಸೈಕೀ ಆ ಕತ್ತಲಲ್ಲಿ ಹಿಂಬಾಲಿಸಿದಳು. ಅವನು ಕಾಣಿಸಲಿಲ್ಲ. ಧ್ವನಿಯಷ್ಟೇ ಕೇಳಿಸಿತು. ತಾನಾರೆಂದು ಹೇಳಿದ, ಹತಾಶ ದುಃಖದಲ್ಲಿ ನುಡಿದ, "ನಂಬಿಕೆ ಇಲ್ಲದಲ್ಲಿ ಪ್ರೀತಿ ಹೇಗೆ ತಾನೇ ಇದ್ದೀತು ?"

"ಪ್ರೀತಿಯ ದೇವತೆಯೇ ನನ್ನ ಕೈಹಿಡಿದಾತ. ಅವನ ಪ್ರೀತಿ ನಂಬುಗೆಗೆ ದ್ರೋಹ ಬಗೆದೆ. ಶಾಶ್ವತಕ್ಕೂ ದೂರವಾದನೇ ?" ಸೈಕಿ ಹಲುಬಿದಳು. ನಿರ್ವಿಣ್ಣವಾಗಿ

ಕೂತಳು. ಕೊನೆಗೆ ನಿರ್ಧಾರದಲ್ಲಿ ನಿಂತಳು. "ಕೊನೆ ಉಸಿರು ಇರುವವರೆಗೆ ಅವನ ಹುಡುಕುವೆ. ನನ್ನ ಬಗ್ಗೆ ಅವಗೆ ಪ್ರೀತಿ ಅಳಿದಿದ್ದರೇನಂತೆ. ನಾನೆಷ್ಟು ಅವನ ಪ್ರೀತಿಸುವೆ ಎಂದು ಅವಗೆ ತೋರಿಸಿಯೇ ತಿರುತ್ತೇನೆ" ಎಂದು ತನಗೆ ತಾನೇ ನುಡಿದಳು. ಹೊರಟಳು. ಎಲ್ಲೆಂದು ಹೋದಾಳು ಮುಗ್ಧ ಚೆಲುವೆ? ಅವನು ದೊರಕುವವರೆಗೆ ನಿಲ್ಲಬಾರದು ಎಂದಷ್ಟೇ ಅವಳಿಗೆ ಗೊತ್ತಿದ್ದ ಸತ್ಯ.

ಇತ್ತ ಮನ್ಮಥ ಕ್ಯುಪಿಡ ಸುಟ್ಟ ನೋವಿನಲ್ಲಿ ತಾಯಿ ವೀನಸ್ ಬಳಿಗೆ ಬಂದ. ಸೈಕಿಯೇ ಆ ಹುಡುಗಿ ಎಂದು ಗೊತ್ತಾದದ್ದೇ ವೀನಸ್ ಕೆರಳಿದಳು. "ಅನುಭವಿಸು, ಅದು ನಿನ್ನ ಪಾಡು" ಎಂದು ಮುನಿಸಿ ಹೊರಟಳು. ದೇವತೆಯ ಆಗ್ರಹಕ್ಕೆ ತುತ್ತಾಗುವುದೆಂದರೆ ಏನೆಂದು ಅವಳಿಗೆ ಕಲಿಸುವೆ ಎಂದು ಹೊರಟಳು.

ಪಾಪ, ಸೈಕೀ ಕಂಡ ಕಂಡ ದೇವರೆದುರು ಪ್ರಾರ್ಥಿಸಿದಳು, ಗೋಗರೆದಳು, ವೀನಸ್‌ಳನ್ನು ಎದುರು ಹಾಕಿಕೊಳ್ಳುವ ಧೈರ್ಯ ಯಾವ ದೇವರಿಗಿದೆ ? ದಿಕ್ಕುಗಾಣದ ಬಾಲೆ ನಿರ್ಧರಿಸಿದಳು, "ಹೋಗುತ್ತೇನೆ ವೀನಸ್ ಬಳಿ. ಅವಳ ಸಿಟ್ಟು ತಣಿಯುವ ವರೆಗೆ ಜೀತ ಮಾಡುತ್ತೇನೆ."

ವೀನಸ್ ಬಳಿ ಸೈಕೀ ಬಂದಳು. "ಗಂಡನನ್ನು ಹುಡುಕುತ್ತ ಬಂದೆಯಾ? ನೀನ ವನ : ಬಿಟ್ಟೇ ಬಿಡುವಾಕೆ" ಎಂದು ವೀನಸ್ ವ್ಯಂಗ್ಯವಾಡಿದಳು. "ಹೊಗಲಿ, ನೀನೋ ಪೆದ್ದು ಹುಡುಗಿ. ಕಷ್ಟ ಪಡದೇ ಅಂಥಾ ಗಂಡ ಹೇಗೆ ಸಿಕ್ಕಾನು ಹೇಳು ? ಕಲಿಸು ತ್ತೇನೆ ಕಷ್ಟ ಪಡುವುದ" ಎಂದು ಹೇಳಿ ಸಕಲ ಧಾನ್ಯಗಳ ಬೀಜಗಳ ಕಲೆಸಿ ಬೆಟ್ಟ ದಷ್ಟೆತ್ತರದ ರಾಶಿ ಮಾಡಿ ಮುಂದಿಟ್ಟಳು. "ರಾತ್ರಿಯಾಗುವುದರೊಳಗಾಗಿ ಪ್ರತ್ಯೇಕಿಸು. ನಿನ್ನ ಒಳಿತಿಗೇ ಇದು" ಎಂದು ಮಾಯವಾದಳು.

ಸೈಕೀ ಕೂತಳು ಧಾನ್ಯದ ರಾಶಿಯೆದುರು, ಏನು ಮಾಡಿಯಾಳು? ತಲೆಕೆಟ್ಟು, ಕೈ ಚೆಲ್ಲಿ ಕೂತಳು. ದೇವತೆಯರಿಗೆ ಕರುಣೆ ಹುಟ್ಟದಿದ್ದರೇನಂತೆ, ಪುಟ್ಟ ಇರುವೆ ಗಳಿಗೆ ಕರುಣೆ ಉಕ್ಕಿತು. "ಬನ್ನಿ. ಬನ್ನಿ, ಈ ನಿರ್ಭಾಗ್ಯ ಹೆಣ್ಣಿಗೆ ಸಹಾಯ ಮಾಡೋಣ" ಎಂದು ಅವು ಕೂಗಿ ಕರೆದವು. ಅಲೆಗಳಂತೆ ಬಂದವು ಕೋಟಿ ಕೋಟಿ ಇರುವೆಗಳು. ರಾಶಿ ಧಾನ್ಯವ ಪ್ರತ್ಯೇಕಿಸಿ ಮರಳಿದವು. ವೀನಸ್ ಬಂದಾಗ, ಇದೇ ನಿದು, ಪ್ರತಿಯೊಂದು ಧಾನ್ಯದ ಬೀಜ, ಪ್ರತ್ಯೇಕ ರಾಶಿ ಕಟ್ಟಿ ಕೂತಿವೆ. ಸಿಟ್ಟೆದ್ದ ದೇವತೆ ಇನ್ನೊಂದು ಕೆಲಸವಿತ್ತಳು.

"ನದೀ ತೀರಕ್ಕೆ ಹೋಗು. ಅಲ್ಲಿ ಚಿನ್ನದ ಮೈಯ ಕುರಿಗಳು ಮೇಯುತ್ತವೆ. ಅವು ಗಳ ಚಿನ್ನದ ಉಣ್ಣೆ ತಾ" ಎಂದಳು. ನದೀ ತೀರಕ್ಕೆ ಬಂದ ಸೈಕಿ ದುಃಖಿತಳಾಗಿದ್ದಳು. ಆಗ ಅವಳ ಕಾಲ್ಕೆಸೆಯಲ್ಲಿ ಹುಲ್ಲಗರಿಯೊಂದು ಮಾತಾಡಿತು. "ಅಯ್ಯೋ ಪೆದ್ದಿ, ಎದೆಗೆಡಬೇಡ. ಕುರಿಗಳೇನೋ ದಕ್ಕವು, ನಿಜ. ಆದರೆ ಅವು ನದೀ ಬಯಲಿನ ಪೊದರುಗಳೆಡೆ ಮೇದು ಮಲಗುತ್ತವೆ. ಅಲ್ಲಿಂದಾರಿಸಿಕೋ" ಎಂದಿತು. ಸೈಕಿ ಉಣ್ಣೆಯ ಗೊಂಚಲೊಂದಿಗೆ ಬಂದಿದ್ದೇ ವೀನಸ್‌ಗೆ ರೋಷ ಉಕ್ಕಿತು. "ಹೆಣ್ಣೇ,

ಯಾರೋ ಸಹಾಯ ಮಾಡುತ್ತಿದ್ದಾರೆ ನಿನಗೆ. ನೀನೇ ಸಾಧಿಸಿದ ಕೆಲಸಗಳಲ್ಲ ಇವು" ಇನ್ನೊಂದು ಕೆಲಸ ಹೇಳುವೆ. ನೀನು ನಿಜಕ್ಕೂ ಎದೆಗಾತಿಯಾದರೆ ಸಾಧಿಸಿ ಬಾ. ಎಂದಳು. "ಅಲ್ಲಿ ನೋಡು, ಕರಿ ನೀರು ಹರಿವ ನದಿ ನೋಡು. ಸ್ಟೈಕ್ಸ್ ನದಿ ಅಲ್ಲಿ ಹುಟ್ಟುತ್ತದೆ. ಸಾವಿನ ನದಿ ಅದು. ಹೋಗು, ಈ ಪಾತ್ರೆ ತುಂಬಾ ನೀರು ತುಂಬಿ ತಾ" ಎಂದಳು.

ಸೈಕಿ ಹೊರಟಳು. ಜಲಪಾತದ ಬಳಿ ಬಂದಾಗ ಆ ನದೀ ಮೂಲ ಸೇರುವುದೆಂತು? ರೆಕ್ಕೆ ಇದ್ದರಷ್ಟೇ ಸಾಧ್ಯ. ಸೈಕಿ ಆಸೆ ತೊರೆದಳು. ಆಗ ಗಿಡುಗವೊಂದು ಹಾರಿ ಬಂದು, ಪಾತ್ರೆಯ ಕೊಕ್ಕಲಿ ಎತ್ತಿ, ನದಿಯ ಮೂಲಕ್ಕಿಳಿದು ನೀರು ತುಂಬಿ ತಂದುಕೊಟ್ಟಿತು.

ವೀನಸ್‌ಗೆ ಗಾಯಕ್ಕೆ ಉಪ್ಪು ಬಳಿದಂತಾಯಿತು. ಛಲ ಬಿಡದೇ, ಇನ್ನೊಂದು ಕೆಲಸ ಸೈಕಿಗೆ ಹಚ್ಚಿದಳು. "ಪಾತಾಳಕ್ಕೆ ಹೋಗಿ ಪ್ರೊಸರ್ಪೀನ್‌ಳ ಸೌಂದರ್ಯವನ್ನು ಈ ಪುಟ್ಟ ಪೆಟ್ಟಿಗೆಯಲ್ಲಿ ತಾ" ಎಂದಳು. ಎಂದಿನ ವಿಧೇಯತೆಯಲ್ಲಿ ಸೈಕಿ ಹೊರಟಳು. ದಾರಿ ಗೋಪುರವೊಂದು ದಾರಿ ತೋರಿತು, "ಮಗಳೇ, ಪಾತಾಳದ ದ್ವಾರ ಪಾಲಕನಿಗೊಂದು ಕಾಸು ನೀಡು. ಮತ್ತೇರಿರುವ ಮೂರು ತಲೆಯ ಕಾವಲು ನಾಯಿಗೆ ಈ ಸಿಹಿ ತಿನ್ನಿಸು. ಬಾಲವಾಡಿಸುತ್ತದೆ. ವಿಜಯಿಯಾಗಿ ಮರಳು, ಮಗಳೇ" ಎಂದಿತು. ಹೋಗಿ ಪಡೆದಳು ಸೈಕಿ ಪುಟ್ಟ ಪೆಟ್ಟಿಗೆ ತುಂಬಾ ಪ್ರೊಸರ್ಪೀನ್‌ಳ ಸೌಂದರ್ಯ. ಮರಳುವ ದಾರಿಯಲ್ಲಿ ತನ್ನ ಕುತೂಹಲವ ತಡೆಯದಾದಳು, ಗಂಡನನ್ನು ಸೇರುವ ಹಂಬಲಕ್ಕೆ ವೀನಸ್‌ಗೇತಕ್ಕೆ ಈ ಸೌಂದರ್ಯದ ಪೆಟ್ಟಿಗೆ. ನನ್ನ ಚೆಲುವ ಗಂಡನಿಗೆ ನೀಡುವೆ ಎಂದು ಆ ಭೀಕರ ಪೆಟ್ಟಿಗೆಯನ್ನು ತೆರೆದಳು. ಮೃತ್ಯು ಸದೃಶ ಗಾಢ ನಿದ್ರೆ ಸೈಕಿಯನ್ನಾವರಿಸಿತು.

ಅಲ್ಲಿ ಗುಣಮುಖನಾದ ಮನ್ಮಥ ಕ್ಯುಪಿಡ್ ಸೈಕಿಗಾಗಿ ಪರಿತಪಿಸುತ್ತಿದ್ದ. ತೇಲುತ್ತಾ, ಹುಡುಕುತಾ ಬಂದ, ತನ್ನ ನಲ್ಲೆಯನ್ನು ಗಾಢನಿದ್ರೆಯಲ್ಲೊರಗಿದ್ದ ಸೈಕಿಯನ್ನು ಕಂಡ. ಅವಳ ಕಣ್ಣಿಗಾವರಿಸಿದ್ದ ನಿದ್ರೆಯನ್ನು ಒರೆಸಿ ತೆಗೆದ. ಸೈಕಿ ಕಣ್ಣು ತೆರೆದಳು, ಆದರೆ ತನ್ನ ತೊರೆದ ತನ್ನ ಒಲವಿನ ನಲ್ಲ, ತನ್ನ ಜೀವ ಮರಳಿ ಕನಸಿಗೆ ಮರಳಲು ಮತ್ತೆ ಒರಗಿದಳು. ಅವನು ಗದರಿದ. "ಏ ಹೆಣ್ಣೇ, ನಿನ್ನ ಕುತೂಹಲ ಜೀವ ತೆಗೆದೀತು. ಮೊದಲು ತಲುಪಿಸು ಈ ಡಬ್ಬಿಯನ್ನು ಅಮ್ಮನಿಗೆ". ಹರ್ಷದಲ್ಲಿಸೈಕಿ ನಡೆದಳು.

ಇತ್ತ ಕ್ಯುಪಿಡ್ ಜಿಗಿದ ಜ್ಯೂಪಿಟರ್ ದೇವನಲ್ಲಿಗೆ. "ನಮ್ಮಮ್ಮನ ಕೈಯಿಂದ ಈ ಹುಡುಗಿಯನ್ನು ಉಳಿಸಿ, ಹರಿದು ಮುಕ್ಕುತ್ತಾಳೆ ಹೀಗೇ ಬಿಟ್ಟರೆ" ಎಂದು ದೂರಿದ.

ಜ್ಯುಪಿಟರ್ ದೇವತೆಗಳ ಸಭೆ ಕರೆದ. ಕ್ಯುಪಿಡ್, ಸೈಕಿ ವಿವಾಹಿತರೆಂದು ಘೋಷಿಸಿದ. ಸೈಕಿಗೆ ಅಮರತ್ವ ನೀಡಿದ.

ಸೈಕಿ ದೇವತೆಯೇ ಆದ ಮೇಲೆ ಜಾತಿ ಬೇರೆಯೆಂದು ವೀನಸ್ಸಾದರೂ ಹೇಗೆ ಗೊಣಗಿಯಾಳು. ಭೂಮಿಯಲ್ಲಿ ಜನರ ತಲೆ ತಿರುಗಿಸಿ ತನಗೆ ಸ್ಪರ್ಧಿಯಾಗುವ ಬದಲು, ದೇವಲೋಕದಲ್ಲಿ ಗಂಡ, ಮಕ್ಕಳು, ಮರಿ ಎಂದು ಸೈಕಿ ಸುಮ್ಮನಿರುವುದು ಎಷ್ಟೋ ವಾಸಿ ಎಂದು ಅವಳಿಗೂ ಅನ್ನಿಸಿರಬೇಕು.

ಹೀಗೆ ಎಲ್ಲವೂ ಸುಖಾಂತವಾಯಿತು. ಪ್ರೀತಿ ಮತ್ತು ಆತ್ಮ (ಸೈಕಿ ಎಂದರೆ ಆತ್ಮ ಎಂಬರ್ಥ) ಜೊತೆಗಿರಲು ಹಾತೊರೆದವು. ಜೊತೆಯಾದವು. ಇನ್ನೆಂದೂ ಅವು ದೂರವಾಗವು.

ಸಂಗ್ರಹ : ಕೆ. ಪಿ. ಸುರೇಶ್

ಜಾತಿ ಸಂಘಟನೆಗಳು......... ೩ ನೇ ಪುಟದಿಂದ

ಇಂದಿಗೂ ಜಾರಿಯಲ್ಲಿದೆಯೆಂದು ಭ್ರಮಿಸಿರುವ ಎಲ್ಲ ಧರ್ಮಗಳೂ, ಜಾತಿ ವರ್ಗಗಳೂ ಹೀಗೆ ವೈಯುಕ್ತಿಕ ಸ್ವಾರ್ಥಗಳನ್ನಷ್ಟೇ ಉಳಿಸಿಕೊಳ್ಳಲು ಹೆಣಗಾಡುತ್ತಿರುವುದು ಸ್ಪಷ್ಟವಾಗುತ್ತದೆ. ಒಕ್ಕಲಿಗರು ತಾವೊಂದು ಜಾತೀಯ ಗುಂಪಾಗಿ ಸಂಘಟಿತರಾದಷ್ಟೇ ಬ್ರಾಹ್ಮಣರೂ ಸಂಘಟಿತರಾಗುತ್ತಾರೆ. ದಲಿತರೂ ಸಂಘಟಿತರಾಗುತ್ತಾರೆ. ಇದರಲ್ಲಿ ಅಚ್ಚರಿಪಡುವುದಕ್ಕೆ ಕಾರಣವೇ ಇಲ್ಲ.

ಪ್ರತಿಯೊಬ್ಬನಿಗೆ ಸಾಮಾಜಿಕ ಭದ್ರತೆ ಹಾಗೂ ಸಮಾನತೆಯ ನಂಬಿಕೆಗಳು ಮೂಡುವವರೆಗೆ ಇವೆಲ್ಲ ಅನಿವಾರ್ಯ. ತನ್ನ ಬದುಕಿಗೆ ಯಾವುದೇ ತೊಂದರೆಯಿಲ್ಲದ ವಾತಾವರಣವನ್ನು ಕಂಡುಕೊಂಡೊಡನೆಯೇ ಇಂತಹ ಎಲ್ಲ ಜಾತಿ ಸಂಘಟನೆಗಳೂ ಕಳಚಿ ಬೀಳುತ್ತವೆ. ಬ್ರಾಹ್ಮಣ ಸಂಘಟನೆಯನ್ನು ಕಂಡು ಬೊಬ್ಬೆ ಹಾಕುವ ಎಲ್ಲರೂ ಇದನ್ನು ಮನಗಾಣಬೇಕಿದೆ. ಅವರು ಪ್ರತಿಭೆಯ ಗುತ್ತಿಗೆ ಹಿಡಿದಿಲ್ಲ. ಇಂದವರು ಎಲ್ಲ ವರ್ಗಗಳಿಂದ ಶೋಷಿತರು, ಕಾಲದ ಸಾಮಾಜಿಕ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳದ ಮೂರ್ಖ ಜನರ ದ್ವೇಷಕ್ಕೆ ಸಿಕ್ಕಿ ನರಳುತ್ತಿರುವವರು. ಇಂದಿನ ಸರ್ಕಾರಿ ಹಾಗೂ ಸಾಮಾಜಿಕ ವ್ಯವಸ್ಥೆಗಳಲ್ಲಿ ಅವರಿಗೆ ಸ್ಥಾನ ಮಾನಗಳು ಇಲ್ಲದೇ ಹಿಂದೆ ಬಿದ್ದಿರುವವರು. ಆದ್ದರಿಂದ ಅವರಲ್ಲಿ ಮೂಡಿರುವ ಅಸ್ಥಿತ್ವದ ಭಯದ ನಿಮಿತ್ತ ಅವರಿಗೆ ಸಂಘಟನೆ ದಲಿತರಷ್ಟೇ, ಒಕ್ಕಲಿಗರಷ್ಟೇ ಅನಿವಾರ್ಯ. ಆದರೆ ಇಂತಹ ಅನಿವಾರ್ಯಗಳ ನಿವಾರಣೆಯೇ ಜಾತ್ಯಾತೀತ ಸಮಾಜದ ಪ್ರಾರಂಭವಾಗುತ್ತದೆ ಎನ್ನುವುದನ್ನು ಎಲ್ಲರೂ ಮನಗಾಣಬೇಕಿದೆ. ★

ರಾಜಕೀಯ ಸಮುದ್ರ ಮಥನ

—ಕುಲದೀಪ ನಯ್ಯರ್

ಸ್ವಾತಂತ್ರ್ಯ ಪಡೆದ ನಂತರದ ಭಾರತದ ಚರಿತ್ರೆಯಲ್ಲಿ ನಾಲ್ಕು ಘಟನೆಗಳು ಜನಮನದಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತಿವೆ. ಇವುಗಳಲ್ಲಿ ಎರಡು ಇಂದಿರಾ ಗಾಂಧಿಯವರ ಅವಧಿಗೆ ಸಂಬಂಧಿಸಿದವುಗಳು: ಕಾಂಗ್ರೆಸಿನ ವಿಭಜನೆ ಹಾಗೂ ತುರ್ತು ಸ್ಥಿತಿ ಹೇರಿಕೆ. ಇನ್ನೆರಡು ಘಟನೆಗಳು ತೀರಾ ಇತ್ತೀಚಿಗಿನವು. ಹಿಂದುಳಿದ ಜಾತಿಗಳಿಗೆ ಮೀಸಲಾತಿ ಒದಗಿಸಿದ ಮಂಡಲ್ ವರದಿ ಜಾರಿ ಹಾಗೂ ಉತ್ತರ ಭಾರತದ ಹಲವು ಭಾಗಗಳಲ್ಲಿ ಸಂಚರಿಸಿದ ರಥ ಯಾತ್ರೆ.

ಒಂದು ದೃಷ್ಟಿಯಲ್ಲಿ ಈ ನಾಲ್ಕೂ ಘಟನೆಗಳು ರಾಷ್ಟ್ರವನ್ನು ಒಡೆದು ರಾಜಕೀಯ ವ್ಯವಸ್ಥೆಯನ್ನು ದುರ್ಬಲಗೊಳಿಸಿವೆ; ಇನ್ನೊಂದು ದೃಷ್ಟಿಯಲ್ಲಿ ಯಥಾಸ್ಥಿತಿಗೆ ಸವಾಲು ಹಾಕಿವೆ. ಈ ಘಟನೆಗಳು ಕೆರಳಿಸಿರುವ ಆಶೋತ್ತರಗಳು ಹಾಗೂ ಬಿಡುಗಡೆಗೊಳಿಸಿರುವ ಜನಶಕ್ತಿಯ ಬೇಡಿಕೆಗಳಿಗೆ ಇನ್ನೂ ಉತ್ತರ ದೊರೆತಿಲ್ಲ. ಕ್ಷೋಭೆ ತಣಿದಿಲ್ಲ ಎಂಬುದಂತೂ ನಿಸ್ಸಂದೇಹ. ಈ ನಾಲ್ಕು ಘಟನೆಗಳನ್ನು ವೈಯಕ್ತಿಕ ಅಥವಾ ರಾಜಕೀಯ ಉದ್ದೇಶಕ್ಕಾಗಿ ಹುಟ್ಟುಹಾಕಲಾಯಿತೆಂಬ ವಿಷಯದಲ್ಲಿ ಇನ್ನೂ ಚರ್ಚೆ ಜಿಜ್ಞಾಸೆ ನಡೆಯುತ್ತಲೇ ಇದೆ. ಏನಿದ್ದರೂ ಈ ಘಟನೆಗಳ ಪರಿಣಾಮ ಮಾತ್ರ ಅಪರಿಮಿತವಾದುದು. ಇದರಿಂದ ರಾಷ್ಟ್ರದ ಪಥವೇ ಬದಲಾಗಲೂ ಬಹುದು.

ನೌಕರ ಶಾಹಿಯ ನಿರಂಕುಶ ಆಡಳಿತಕ್ಕೆ ಅವಕಾಶ ನೀಡಿದ್ದೆ ಇಂದಿರಾಗಾಂಧಿ ಮಾಡಿದ ದೊಡ್ಡ ತಪ್ಪು. ಪಕ್ಷದೊಳಗೆ ಮೇಲುಗೈ ಸಾಧಿಸಲು ಇಂದಿರಾಗೆ ಆಡಳಿತ ಯಂತ್ರವನ್ನು ಉಪಯೋಗಿಸಿ ನೆರವಾದ ನೌಕರ ಶಾಹಿಯು ತುರ್ತುಸ್ಥಿತಿ ಕಾಲದಲ್ಲಿ ವಿರೋಧವನ್ನು ಅಡಗಿಸಲು ಸರ್ವಶಕ್ತಿಯನ್ನೂ ಬಳಸಿದರು. ಇಂದಿರಾಗಾಂಧಿಯೂ ನೌಕರಶಾಹಿಯೂ ಜನರ ಸ್ಥಿತಿಗತಿ ಪರಿವರ್ತಿಸುವುದು ಸಾಧ್ಯವಾಗಲಿಲ್ಲ. ಆದರೆ ಅವರಲ್ಲಿ ಮಾನಸಿಕ ಬದಲಾವಣೆ ತರುವುದರಲ್ಲಿ ಶಕ್ತರಾದರು. ಜೀವನಮೌಲ್ಯಗಳು ಕುಸಿದುಬಿದ್ದವು. ಯಶಸ್ಸೊಂದೇ ಮಹತ್ವದ್ದಾಯಿತು. ಅದನ್ನು ಸಾಧಿಸುವ ಮಾರ್ಗ ಯಾವುದಾದರೂ ಸರಿ. ಅವರ ಮಗ ರಾಜೀವ್‌ಗಾಂಧಿ ಸರ್ವಾಧಿಕಾರಿ ವಿಧಾನಗಳನ್ನು ಸುಧಾರಿಸಿ ಹೆಚ್ಚು ಹರಿತವನ್ನಾಗಿ ಮಾಡಿದರು. ತಮ್ಮ ಪಕ್ಷಕ್ಕೆ

ಯಾವುದು ಉತ್ತಮವೋ ಇಡೀ ದೇಶಕ್ಕೂ ಅದೇ ಉತ್ತಮವೆಂಬ ಸಿದ್ಧಾಂತ ಅವರದ್ದು. ಒಮ್ಮೆ ನೀತಿಯ ತಳಹದಿ ಕುಸಿದು ಹೋದ ಮೇಲೆ ಜನತೆ ಸರಿ-ತಪ್ಪುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದನ್ನು ನಿಲ್ಲಿಸಿಬಿಟ್ಟರು. ನೀತಿ ಯಾವುದು, ಅನೀತಿಯಾವುದು ಎಂಬುದು ಮಹತ್ವದ್ದೆನಿಸಲಿಲ್ಲ.

ಹಿಂದುಳಿದ ಜಾತಿಗಳಿಗೆ ಮೀಸಲಾತಿ ಒದಗಿಸುವ ಮಂಡಲ್ ಆಯೋಗದ ಶಿಫಾರಸು ಜಾರಿಗೆ ತರಲಾಗುವುದೆಂಬ ವಿ. ಪಿ. ಸಿಂಗ್ ಅವರ ಘೋಷಣೆಯಿಂದ ಈ ಜಾತಿಗಳಿಗೆ ಕೇಂದ್ರ ಸರ್ಕಾರದಲ್ಲಿ ದೊರೆಯುವ ಹುದ್ದೆಗಳು ೨೦ ಸಾವಿರದಷ್ಟು ಮಾತ್ರ. ಆದರೆ ಇದರಿಂದ ತಮಗೆ ಅನ್ಯಾಯವಾಗಿದೆ ಎಂದು ಮೇಲ್ಜಾತಿಗಳ ಜನ ಭಾವಿಸುವಂತಾಗಿದೆ. ಸಮಾಜದಲ್ಲಿ ಜಾತಿ ವೈಷಮ್ಯ ತೀವ್ರವಾಗಿದೆ. ಜಾತಿ ಜಾತಿ ನಡುವಿನ ಮೇಲು ಕೀಳು, ಅಸಮಾನತೆ ಹೆಚ್ಚು ಸ್ಪಷ್ಟವಾಗಿ ಗೋಚರವಾಗಲು ತೊಡಗಿದೆ. ತಮ್ಮ ಬದುಕಿನ ಸ್ಥಿತಿ ಗತಿ ಸುಧಾರಣೆಯ ಕಾಲ ಹೆಚ್ಚು ದೂರವಿಲ್ಲವೆಂದು ಕೆಳಜಾತಿಗಳವರು ಸಮಾಜದ ಕೆಳಗಿನ ಅರ್ಧಾಂಶ ಜನ ಭಾವಿಸಲು ಪ್ರಾರಂಭಿಸಿದ್ದಾರೆ.

ಸಮಾಜದ ಬಹುತೇಕ ಜನರು ಬಡವರಾಗಿಯೇ ಉಳಿದಿರುವ ಈ ದೇಶದಲ್ಲಿ ಬದಲಾವಣೆಯ ಆಶಯವು ಸಹಜವೇ ಆಗಿದೆ. ಮೇಲ್ಜಾತಿಗಳ ಜನ ಕೆಳಜಾತಿಗಳಿಗೆ ನ್ಯಾಯ ನೀಡಲು ಅನೇಕ ಶತಮಾನಗಳಿಂದ ನಿರಾಕರಿಸಿದ್ದಾರೆ ಎಂಬ ವಿ. ಪಿ. ಸಿಂಗ್ ಅವರ ಮಾತಿನಲ್ಲಿ ತಥ್ಯವಿದೆ. ಆದರೆ ಈ ಬದಲಾವಣೆ ಶೀಘ್ರದಲ್ಲಿ ಪ್ರಜಾತಂತ್ರ ವ್ಯವಸ್ಥೆ ಕಲ್ಪಿಸುವಂತಹ ಶಿಸ್ತುಬದ್ಧ ರೀತಿಯಲ್ಲಿ ಉಂಟಾಗುವುದೇ ಎಂಬುದೇ ಮುಖ್ಯ ಪ್ರಶ್ನೆ. ಮೇಲ್ಜಾತಿಗಳವರು ಸುಮ್ಮನೆ ಕೂರಲಾರರು ಎಂಬುದನ್ನು ಮಂಡಲ್ ವಿರೋಧಿ ಚಳವಳಿ ಕಾಲದಲ್ಲಿ ನಡೆದ ಆತ್ಮದಹನ ಪ್ರಕರಣಗಳು ತೋರಿಸಿಕೊಡುತ್ತವೆ.

ಮೇಲ್ಜಾತಿಗಳವರು ಹಾಗೂ ಹಿಂದುಗಳಲ್ಲಿನ ಬುದ್ಧಿ ಜೀವಿಗಳಿಗೆ ಗಾಬರಿಯಾಗಿದೆ. ಆದರೆ ಹಿಂದುಳಿದ ಜಾತಿಗಳ ಜನ ಹಿಂದೆಯೇ ಉಳಿಯುವ ಈ ಅವಾಸ್ತವಿಕ ವ್ಯವಸ್ಥೆ ಹೆಚ್ಚು ಕಾಲ ಬಾಳಬಾರದೆಂಬ ವಿಷಯ ಅವರಿಗೆ ಮನವರಿಕೆಯಾಗಿಲ್ಲ. ಹಿಂದುಳಿದ ವರ್ಗದವರ ಅಹವಾಲನ್ನು ಬಹಿರಂಗಕ್ಕೆ ತರುವ ಕಾರ್ಯವನ್ನು ಇದೀಗ ವಿ. ಪಿ. ಸಿಂಗ್ ಮಾಡಿರಬಹುದಾದರೂ ಇಂದಲ್ಲವಾದರೆ ನಾಳೆ ಅಸಮಾನತೆ ಹೊರ ಬರಲೇಬೇಕಾಗಿತ್ತು. ಇದೀಗ ವಿ. ಪಿ. ಸಿಂಗ್ ಬಡವರ್ಗಗಳನ್ನು ಒಂದುಗೂಡಿಸುವ ಮೂಲಕ ಭಾರತದ ರಾಜಕಾರಣದಲ್ಲಿ ಮಹತ್ವದ ಬದಲಾವಣೆ ಉಂಟು ಮಾಡಿದ್ದಾರೆ. ಆದರೆ ಈ ಬೆಳವಣಿಗೆಯ ವಿಷಾದನೀಯ ಅಂಶವೆಂದರೆ ಜಾತಿ-ಜಾತಿಗಳ ತಾರತಮ್ಯದ ಪ್ರಜ್ಞೆ ಅತ್ಯಂತ ಅಧಿಕ ಪ್ರಮಾಣದಲ್ಲಿ ಉಂಟಾಗಿರುವುದು. ಈ ಪ್ರಜ್ಞೆಯನ್ನು ಭವಿಷ್ಯದ ಭಾರತವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ಹಿನ್ನೆಲೆಯಲ್ಲಿ ಎಲ್. ಕೆ. ಅಡ್ವಾಣಿ ಅವರು ನಡೆಸಿದ ರಥಯಾತ್ರೆ ಚಲಿಸಿದ ಮಾರ್ಗದುದ್ದಕ್ಕೂ ರಕ್ತ ಕೋಡಿ ಹರಿದಿದೆ. ರಥ ಸಾಗಿದ ಸ್ಥಳಗಳಲ್ಲೆಲ್ಲ ರಸ್ತೆಗಳಲ್ಲೆಲ್ಲ ಹಿಂದೂ-ಮುಸ್ಲಿಂ ಗಲಭೆ ನಡೆದಿದೆ. ಆದರೆ ಈವರೆಗೆ ಗ್ರಾಮೀಣ ಪ್ರದೇಶಗಳು ಈ ಹಿಂಸಾಚಾರದಿಂದ ಹೊರಗುಳಿದಿದ್ದವು. ಅಡ್ವಾಣಿ ಅವರ ರಥ ಯಾತ್ರೆಯೂ ಹಳ್ಳಿಗಾಡಿನ ಕೋಮು ಸೌಹಾರ್ದಗಳನ್ನೂ ಕೆಡಿಸಿಬಿಟ್ಟಿದೆ!

ಇಂದಿರಾಗಾಂಧಿ ಹಾಗೂ ಅಡ್ವಾಣಿಯವರು ಹುಟ್ಟುಹಾಕಿರುವಂತಹ ವಿದ್ಯಮಾನಗಳು ಯಾವುದೇ ಮುಂದುವರಿದ ಶ್ರೀಮಂತ ದೇಶಕ್ಕೂ ಅಪಾಯಕಾರಿಯಾದವುಗಳು. ಪ್ರತಿಯೊಂದು ವರ್ಗವೂ ಸೌಲಭ್ಯಗಳನ್ನೆಲ್ಲ ಮತ, ಜಾತಿ ಅಥವಾ ಭಾಷೆಯ ನೆಪದಲ್ಲಿ ತಾವೇ ಕಬಳಿಸಲು ಹೊಂಚು ಹಾಕುತ್ತಿರುವ ಭಾರತಕ್ಕಂತೂ ಇವುಗಳು ಅಪಾರ ಹಾನಿ ಉಂಟುಮಾಡಿವೆ ಜನರ ಭಾವನೆಗಳೂ ಅವರ ಆಶೋತ್ತರಗಳೂ ಕೆರಳಿ ಕುಳಿತಿವೆ. ಗಡಿಯ ರಾಜ್ಯಗಳಲ್ಲಿ ಬಂಡಾಯ ನಡೆದಿದೆ. ಈ ಹಿನ್ನೆಲೆಯಲ್ಲಿ ವಿವಿಧ ಜನವರ್ಗಗಳ ಹಕ್ಕುಸ್ಥಾಪನೆ ಆಗ್ರಹಗಳನ್ನು ಪೂರೈಸುವುದು ಈ ಬಡ ದೇಶದ ಯಾವುದೇ ರಾಜಕೀಯ ಪಕ್ಷಕ್ಕೂ ಒಬ್ಬಂಟಿಯಾಗಿ ಸಾಧ್ಯವಿಲ್ಲ. ಇಂತಹ ಸಮಸ್ಯೆಗಳನ್ನು ಸಂಘಟಿತವಾಗಿ ಎದುರಿಸಲು ರಾಜಕೀಯ ನಾಯಕರು ವೋಟುಗಳಿಸುವ ತಂತ್ರಗಾರಿಕೆಯನ್ನು ತೊರೆದು ಮೇಲೆ ನಿಂತು ವ್ಯವಹರಿಸುವ ಸಾಧ್ಯತೆ ನನಗಂತೂ ಕಾಣಿಸುತ್ತಿಲ್ಲ.

ಪ್ರಧಾನಿಯಾಗುವುದಕ್ಕಾಗಿ ಚಂದ್ರಶೇಖರ್ ಜನತಾದಳ ತೊರೆದಿದ್ದು ಅತಿ ಹೇಯವಾದ ಸಮಯ ಸಾಧಕ ನೀತಿಯಲ್ಲದೆ ಬೇರೆಯಲ್ಲ. ತಾವೇ ನಿಂದಿಸಿದ ವ್ಯಕ್ತಿ ತಮಗೆ ವೋಟು ಗಳಿಸಿಕೊಡಬಲ್ಲನೆಂದರೆ ಮತ್ತೆ ಅವನನ್ನು ಹಾಡಿ ಹೊಗಳಿ ಹತ್ತಿರ ಸೇರಿಸಿಕೊಳ್ಳುವುದಕ್ಕೆ ಇಂದು ಯಾರಿಗೂ ಮುಜುಗರವಿಲ್ಲ. ನಮ್ಮ ಪ್ರಮುಖ ರಾಜಕೀಯ ಪಕ್ಷಗಳು ಬೆಳೆಸುತ್ತಿರುವ ಇಂತಹ ಕೆಟ್ಟ ಸಂಸ್ಕೃತಿಗೆ ಬನ್ಸಿಲಾಲರೊಡನೆ ಜನತಾದಳ ಮೈತ್ರಿಯೂ ಚಿಮಣ್ ಭಾಯಿ ಜತೆ ಕಾಂಗ್ರೆಸ್ ನಡೆಸಿರುವ ಸ್ನೇಹಾರಚಾರವೂ ನಿದರ್ಶನ.

ಹಿಂದೂ ಪುರಾಣದಲ್ಲಿ ಸಮುದ್ರ ಮಥನದ ಕತೆಯಿದೆ. ಸಾವಿರಾರು ವರ್ಷಗಳ ಹಿಂದೆ ದೇವತೆಗಳೂ ರಾಕ್ಷಸರೂ ಕೂಡಿ ಅಮೃತಕ್ಕಾಗಿ ಸಮುದ್ರವನ್ನು ಕಡೆದರು. ಮೊದಲು ವಿಷ ಉದ್ಭವಿಸಿತು. ವಿನಾಶದ ಅಧಿದೇವತೆಯಾದ ಶಿವನು ಈ ವಿಷವನ್ನು ಕುಡಿದು ನೀಲಕಂಠನೆನಿಸಿ ಲೋಕ ವಿನಾಶವನ್ನು ತಪ್ಪಿಸಿದ. ಆ ಮೇಲೆ ಅಮೃತ ಉದ್ಭವಿಸಿತು. ಇದೀಗ ನಮ್ಮ ನಾಯಕರು ಭಾರತವನ್ನು ಮಥನ ಮಾಡುತ್ತಿದ್ದಾರೆ. ಇದರಲ್ಲಿ ಕೆಟ್ಟ ಪರಿಣಾಮಗಳೂ ಹುಟ್ಟಿಕೊಂಡಿವೆ. ಈ ವಿಷವನ್ನು ಕುಡಿದು ಸಮಾಜವನ್ನು ರಕ್ಷಿಸುವ ಸಾಮರ್ಥ್ಯವುಳ್ಳ ನಂಜುಂಡನಂತಹ ನಾಯಕ ಮಾತ್ರ ಕಾಣಿಸುತ್ತಿಲ್ಲ. ಎಲ್ಲವೂ ಮುಗಿದು ಹೋದ ಮೇಲೆ ಅಮೃತ ಹುಟ್ಟಿಬಂದರೂ ಫಲವೇನು?

(ಪ್ರಜಾವಾಣಿ ಸಾಭಾರ)

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ–ಒಂದು ಪರಿಚಯ

ಮೂಲ : ಮಸನೋಬು ಫುಕುವೋಕಾ ಕನ್ನಡಾನುವಾದ : ಸಂತೋಷ್ ಕೌಲಗಿ; ಬೆಲೆ : 15 ರೂ.

ಮನುಕುಲ ವಿನಾಶ : ಬಾಂಬ್ ಬೇಕಿಲ್ಲ ಅಣುಸ್ಥಾವರ ಸಾಕು

ಡಾ॥ಎ. ಎಸ್. ನಾಗರಾಜ್

ಬೆಲೆ : 2–00 ರೂ.

ಮಾರಾಟಕ್ಕೆ

ಸಹಜ ಕೃಷಿ : ಒಂದು ಪರಿಚಯ

ಲೇಖಕರು : ಪೂರ್ಣಚಂದ್ರ ತೇಜಸ್ವಿ

ಬೆಲೆ : ೬/–ರೂ

ಕಾವ್ಯಸುಧಾ : ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

–ಬೆಲೆ5:00 ರೂ.

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ